ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 160 RNI Number : KNKAN/25/A2770 18-06-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :160 ರಾಯಚೂರು 18-06-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಪರಿಷತ್‌ನ ಏಳು ಸ್ಥಾನಗಳಿಗೆ ಇಂದು ಮತದಾನ :ಅಡ್ಡ ಮತದಾನದ ತಡೆಯಲು ಹರಸಾಹಸ

ಬೆಂಗಳೂರು,ಜೂ.17- ಆಡಳಿತರೂಢ ಕಾಂಗ್ರೆಸ್ ಹಾಗೂ ಪ್ರತಿಪಕ್ಷಗಳ ನಡುವಿನ ಜಿದ್ದಾಜಿದ್ದಿಗೆ ಕಾರಣವಾಗಿರುವ ವಿಧಾನ ಪರಿಷತ್‌ನ ಏಳು ಸ್ಥಾನಗಳಿಗೆ ನಾಳೆ ಮತದಾನ ನಡೆಯಲಿದ್ದು ಅಡ್ಡ ಮತದಾನದ ಮೇಲೆ ಎಲ್ಲರ ಕಣ್ಣು ನೆಟ್ಟಿದೆ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆಯುತ್ತಿರುವ ಈ ಚುನಾವಣೆ ಆಡಳಿತಾರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಪ್ರಶ್ನೆಯಾದರೆ, ವಿಪಕ್ಷಗಳಿಗೆ ತಮ ಮೈತ್ರಿ ಬಲವನ್ನು ಸಾಬೀತುಪಡಿಸಲು ಇರುವ ಅವಕಾಶವಾಗಿದೆ.

ಈ ಚುನಾವಣೆ ಶಾಸಕರ ಮತಗಳ ಮೂಲಕ ನಡೆಯುವುದರಿಂದ, ಪ್ರತಿ ಅಭ್ಯರ್ಥಿಯ ಗೆಲುವಿಗೆ ನಿಗದಿತ ಮತಗಳ ಅವಶ್ಯಕತೆಯಿದೆ. ಸಂಜೆ ಮತ ಎಣಿಕೆ ಮುಗಿಯುತ್ತಿದ್ದಂತೆ ಸ್ಪಷ್ಟ ಚಿತ್ರಣ ಸಿಗಲಿದೆ. ಕಾಂಗ್ರೆಸ್ 4, ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದ್ದು ಉಳಿದಿರುವ ಒಂದು ಸ್ಥಾನಕ್ಕೆ ಕೈ ಹಾಗೂ ಜೆಡಿಎಸ್‌ನಲ್ಲಿ ಬಾರಿ ಪೈಪೋಟಿ ಏರ್ಪಟ್ಟಿದೆ.

ಕಾಂಗ್ರೆಸ್ ಪಕ್ಷದಿಂದ ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ವಿನಯ್ ಕಾರ್ತಿಕ್ ಹಾಗೂ ಎನ್‌ಡಿಎ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿರುವ ಜೆಡಿಎಸ್‌ನ ಗೋವಿಂದ ರಾಜು ನಡುವೆ ಅದೃಷ್ಟ ಯಾರಿಗೆ ಎಂಬುದು ನಾಳೆಯ ಫಲಿತಾಂಶದಿಂದ ತಿಳಿಯಲಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನಡುವಿನ ಪ್ರತಿಷ್ಠೆಯ ಸಮರದಲ್ಲಿ ಗೆಲುವು ಯಾರಿಗೆ ಎಂಬುದನ್ನು ಶಾಸಕರು ನಾಳೆ ತೀರ್ಮಾನಿಸಲಿದ್ದಾರೆ. ವಿಧಾನಸೌಧದ ಕೊಠಡಿ ಸಂಖ್ಯೆ 106 ರಲ್ಲಿ ಬೆಳಿಗ್ಗೆ 8 ಗಂಟೆ ಯಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆದು 5 ಗಂಟೆಯ ನಂತರ ಫಲಿತಾಂಶ ಪ್ರಕಟಗೊ ಳ್ಳಲಿದೆ.

7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಆಡಳಿತಾರೂಢ ಕಾಂಗ್ರೆಸ್ 4 ಮತ್ತು ಬಿಜೆಪಿ 2 ಸ್ಥಾನಗಳನ್ನು ಸುಲಭವಾಗಿ ಗೆಲ್ಲುವಷ್ಟು ಬಲವನ್ನು ಹೊಂದಿವೆ. ವಿಧಾನಸಭೆಯ ಒಟ್ಟು ಮತದಾರರ ಸಂಖ್ಯೆ 222 (ಕೆಲವು ಸದಸ್ಯರ ಅನರ್ಹತೆ ಮತ್ತು ನಿಧನದಿಂದಾಗಿ). ಗೆಲುವಿಗೆ ತಲಾ 28 ಮತಗಳ ಅಗತ್ಯವಿದೆ.

ಅಡ್ಡಮತದಾನದ ಭೀತಿ ಮತ್ತು ತಂತ್ರಗಾರಿಕೆ :



ಈ ಚುನಾವಣೆ ಕೇವಲ ಸಂಖ್ಯೆಗಳ ಆಟವಲ್ಲ, ಇದು ರಾಜಕೀಯ ತಂತ್ರಗಾರಿಕೆಯ ಪರೀಕ್ಷೆಯಾಗಿದೆ. ಕಾಂಗ್ರೆಸ್‌ನ ತಂತ್ರ: ಗೆಲುವಿನ ಅಂಚಿನಲ್ಲಿರುವ ಕಾಂಗ್ರೆಸ್, ತನ್ನ ಮತಗಳ ಕ್ರೋಢೀಕರಣಕ್ಕಾಗಿ ಮತ್ತು ಅಡ್ಡಮತದಾನವನ್ನು ತಡೆಯಲು ತನ್ನ ಶಾಸಕರನ್ನು ರೆಸಾರ್ಟ್‌ನಲ್ಲಿ ಇರಿಸಿ, ಮಾಕ್ ವೋಟಿಂಗ್ ತರಬೇತಿ ನೀಡುತ್ತಿದೆ. ಪಕ್ಷದ ಶಿಸ್ತನ್ನು ಕಾಪಾಡಲು ಸಿಎಂ ಡಿ.ಕೆ. ಶಿವಕುಮಾರ್ ಅವರು ಹದ್ದಿನ ಕಣ್ಣಿಟ್ಟಿದ್ದಾರೆ.

ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳಲು ಬಿಜೆಪಿಯ ಹೆಚ್ಚುವರಿ ಮತಗಳನ್ನು ಮತ್ತು ಅತೃಪ್ತ ಶಾಸಕರ ಬೆಂಬಲವನ್ನು ನಂಬಿಕೊಂಡಿದೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯ ನಡುವೆಯೂ, ಕೆಲವೊಂದು ರಾಜಕೀಯ ಬದಲಾವಣೆಗಳು ಅಡ್ಡಮತದಾನದ ಸಾಧ್ಯತೆಯನ್ನು ಹೆಚ್ಚಿಸಿವೆ.

ಪಕ್ಷೇತರರ ಪಾತ್ರ: ಪಕ್ಷೇತರ ಶಾಸಕರು ಮತ್ತು ನಿರ್ದಿಷ್ಟವಾಗಿ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಶಾಸಕರ ಮತಗಳು ನಿರ್ಣಾಯಕವಾಗಿವೆ. ಇವರನ್ನು ತಮತ್ತ ಸೆಳೆಯಲು ಉಭಯ ಪಕ್ಷಗಳು ತೆರೆಮರೆಯಲ್ಲಿ ಭಾರೀ ಕಸರತ್ತು ನಡೆಸುತ್ತಿವೆ.

ಇದು ''ಗೌಪ್ಯ ಮತದಾನ'' ವ್ಯವಸ್ಥೆಯಾಗಿರುವುದರಿಂದ, ಪಕ್ಷದ ವಿಪ್ ಇದ್ದರೂ ಅಡ್ಡಮತದಾನ ನಡೆಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಹಳೆಯ ಇತಿಹಾಸಗಳನ್ನು ಗಮನಿಸಿದರೆ, ಈ ಬಾರಿಯೂ ಅಚ್ಚರಿಯ ಫಲಿತಾಂಶ ಬರುವ ಸಾಧ್ಯತೆ ಇದೆ.

ಶಾಸಕರ ಅಸಮಾಧಾನ: ಪಕ್ಷದ ಒಳಗಿನ ಅಸಮಾಧಾನಿತ ಶಾಸಕರ ಮೇಲೆ ಎಲ್ಲರ ಕಣ್ಣಿದೆ. ತಮ ಪಕ್ಷದ ನಿರ್ಧಾರದ ವಿರುದ್ಧವಾಗಿ ಅಥವಾ ಅಡ್ಡಮತದಾನದ ಮೂಲಕ ತಮ ಅಸಮಾಧಾನ ಹೊರಹಾಕುವವರನ್ನು ಗುರುತಿಸುವುದು ನಾಯಕರಿಗೆ ದೊಡ್ಡ ಸವಾಲಾಗಿದೆ.

ಪ್ರತಿಷ್ಠೆಯ ಕಣ:

ಕೇವಲ ಒಂದು ಹೆಚ್ಚುವರಿ ಸ್ಥಾನದ ಮೇಲೆ ಇಡೀ ಚುನಾವಣೆಯ ಗತಿಯೇ ಅವಲಂಬಿತವಾಗಿದೆ. ನಾಳೆ ನಡೆಯುವ ಮತದಾನವು ರಾಜ್ಯ ರಾಜಕಾರಣದ ಮುಂದಿನ ದಿಕ್ಕನ್ನು ಸೂಚಿಸಲಿದೆ. ಅಡ್ಡಮತದಾನದ ಭೀತಿಯನ್ನು ಹೋಗಲಾಡಿಸಲು ಯಾವ ಪಕ್ಷದ ತಂತ್ರಗಾರಿಕೆ ಫಲ ನೀಡಲಿದೆ ಎಂಬುದು ಫಲಿತಾಂಶದ ಬಳಿಕವಷ್ಟೇ ಸ್ಪಷ್ಟವಾಗಲಿದೆ.

ವಿಧಾನಸಭೆಯ ಒಟ್ಟು ಶಾಸಕರು- 222
ಖಾಲಿ ಸ್ಥಾನಗಳು -2
ಕಾಂಗ್ರೆಸ್ -137
ಬಿಜೆಪಿ- 64
ಜೆಡಿಎಸ್ -18
ಪಕ್ಷೇತರರು -3

ಕಣದಲ್ಲಿರುವ ಅಭ್ಯರ್ಥಿಗಳು
ಕಾಂಗ್ರೆಸ್
ಬಿ.ಕೆ. ಹರಿಪ್ರಸಾದ್
ತಿಪ್ಪಣ್ಣಪ್ಪ ಕಮಕನೂರು
ಪಿ.ವಿ. ಮೋಹನ್
ಶಿವಣ್ಣ ಮಳವಳ್ಳಿ
ವಿನಯ್ ಕಾರ್ತಿಕ್
ಬಿಜೆಪಿ
ರಘು ಕೌಟಿಲ್ಯ
ಲಿಂಗರಾಜ್ ಪಾಟೀಲ್
ಎನ್ ಡಿ ಎ
ಗೋವಿಂದರಾಜು

ಸಂಘಟಕ, ಯುವ ಸಾಹಿತಿ, ಶಿಕ್ಷಣ ಚಿಂತಕ, ಪ್ರೊಫೆಸರ್ ಈಗ ಡಾ.ಎಸ್.ಕರಿಗೂಳಿ.!!

ರಾಯಚೂರು,ಜೂ.17-

ಶಿಕ್ಷಣ, ಸಂಘಟನೆ, ಹೋರಾಟ, ಅನ್ನುವ ಡಾ.ಬಿ.ಆರ್. ಅಂಬೇಡ್ಕರ್ ಮಾತನ್ನು ಜೀವನದಲ್ಲಿ ಅಳವಡಿಸಿಕೊಂಡ ಬಾಬಾ ಸಾಹೇಬರ ಅಪ್ಪಟ ಅನೂಯಾಯಿ, ಪ್ರೋ ಡಾ.ಎಸ್. ಕರಿಗೂಳಿ ಇಂದು ಡಾಕ್ಟರೇಟ್ ಪಡೆದುಕೊಳ್ಳುವ ಮೂಲಕ ಹಿಂದೂಳಿದ, ದಲಿತ ಕುಟುಂಬದ ಯುವ ವಿದ್ಯಾವಂತರಿಗೆ ಸ್ಪೂರ್ಥಿಯಾಗಿದ್ದಾರೆ.





ಮಾನ್ವಿ ತಾಲುಕಿನ ಸುಂಕೇಶ್ವರ ಗ್ರಾಮದ ಹನುಮಂತ ಮತ್ತು ಯಲ್ಲಮ್ಮ ದಂಪತಿಗೆ ಬಡತನದ ಬವಣೆಯಲ್ಲಿ ಹುಟ್ಟಿದ ಪ್ರೋ. ಡಾ.ಎಸ್.ಕರಿಗೂಳಿ ಶಿಕ್ಷಣ ಎನ್ನುವ ಹಾಲನ್ನು ಕುಡಿದು ಘರ್ಜಿಸಿದ ಈ ಕುಟುಂಬದ ಮೊದಲ ತಲೆಮಾರಿನ ವಿದ್ಯಾವಂತ. 1975ರಲ್ಲಿ ಜನಿಸಿದ ಇವರು ಇಬ್ಬರು ತಮ್ಮಂದಿರು ಮತ್ತು ಇಬ್ಬರು ತಂಗಿಯರಿಗೆ ಹಿರಿಯರಾಗಿ ಕುಟುಂಬದ ಆರ್ಥಿಕ ಜವಬ್ದಾರಿಯನ್ನು ಬೆನ್ನಿಗೆ ಹಾಕಿಕೊಂಡು ಶಿಕ್ಷಣದ ದಾರಿಯ ಗುರಿ ಮುಟ್ಟಿದ ಗುರುವಾಗಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಕುರ್ಡಿ ಗ್ರಾಮದಲ್ಲಿ ಪೂರ್ಣಗೊಳಿಸಿ ಕೊಂಡು , ವಾಣಿಜ್ಯ ವಿಭಾಗದಲ್ಲಿ ಪಿಯುಸಿ ಮತ್ತು ಪದವಿ ಶಿಕ್ಷಣವನ್ನು ರಾಯಚೂರು ಜಿಲ್ಲೆಯ ಬಿ ಆರ್ ಬಿ ಕಾಲೇಜನಲ್ಲಿ ಮುಗಿಸಿಕೊಳ್ಳುತ್ತಾರೆ.

ಆರ್ಥಿಕ ಸಂಕಷ್ಟಗಳ ನಡುವೆಯೂ ಶಿಕ್ಷಣದ ಹಾದಿ .!!

ಸಾಧಿಸುವ ಛಲ ಹೊಂದಿದವರಿಗೆ ಎಂತಹದ್ದೆ ಸಂಕಷ್ಟಗಳು ಎದುರಾದರು ಅವುಗಳನ್ನು ಎದುರಿಸುವ ಎದೆ ಗಾರಿಕೆ ಬೇಕು, ಅಂತಹ ನಿರ್ಭಯದ ಸಾಮರ್ಥ್ಯ ಹೊಂದಿದ ಯುವ ಸ್ಪೂರ್ಥಿ ಪ್ರೋ.ಡಾ.ಎಸ್. ಕರಿಗೂಳಿ ,ಕಾಲೇಜಿನ ದಿನಗಳಿಂದಲೂ ಹೋರಾಟದ ಮನೋಭಾವ ಹೊಂದಿದ್ದ ಇವರು ಡಾ.ಬಿ.ಆರ್ ಅಂಬೇಡ್ಕರ್ ಹಾಸ್ಟೇಲ್ ನಲ್ಲಿ ಆಶ್ರಯಪಡೆದು ಓದನ್ನು ಮುಂದುವರೆಸಿದ ಶಿಕ್ಷಣ ಪ್ರೇಮಿಯಾಗಿದ್ದರು.

ಹಾಸ್ಟೇಲ್ ದಿನಗಳಲ್ಲಿ ಸ್ನೇಹಿತರೊಂದಿಗೆ ಸೇರಿ ಸಂಘಟನೆ ಮಾಡುವ ಚಾಣಕ್ಷತನವನ್ನು ಕಾಲೇಜಿನ ದಿನಗಳಿಂದಲೂ ಬಲ್ಲಂತವರಾಗಿದ್ದು, ಜೊತೆಗೆ ಸಮಾಜದಲ್ಲಿ ನಡೆಯುವ ದೌರ್ಜನ್ಯ ವಿರುದ್ದದ ಧ್ವನಿಯಾಗಿ, ಶೈಕ್ಷಣಿಕ ಹೋರಾಟಗಳು , ಸಮಾಜದ ಹಿರಿಯ ದಲಿತ ಹೋರಾಟಗಾರರೊಂದಿಗೆ ಹೆಜ್ಜೆ ಹಾಕಿದ್ದ ಇವರು ಕೇವಲ ತಮ್ಮ ಸಾಮರ್ಥ್ಯವನ್ನು ಸಂಘಟನೆಗೆ ಮೀಸಲಾಗಿಡದೆ , ಓದಿನ ಕಡೆ ಹೆಚ್ಚಾಗಿ ಆಸಕ್ತಿ ಹೊಂದಿದ್ದಂತಹ ಅಕ್ಷರ ದಾಹಿಯಾಗಿದ್ದಾರೆ.

ಇನ್ನೂ 'ಕೌಟುಂಬಿಕ' ಆರ್ಥಿಕದ ಹೊರೆಯಲ್ಲಿಯೂ ತಮ್ಮ ಪದವಿಯನ್ನು ರಾಯಚೂರಿನಲ್ಲಿ ಮೂಗಿಸಿಕೊಂಡು ಉನ್ನತ್ತ ವ್ಯಾಸಂಗಕ್ಕೆ ಕಲಬುರ್ಗಿ ವಿಶ್ವವಿದ್ಯಾಲಯಕ್ಕೆ ತೆರಳಿ ಎಂ.ಎ ಹಾಗೂ ಎಂ.ಕಾಂ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡ ಇವರು ಕಲಿಯುವ ಆಸಕ್ತಿಯನ್ನು ಎಂದು ಕೈ ಬಿಡಲಿಲ್ಲ . ಶೈಕ್ಷಣಿಕ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದ ಇವರು ತಮ್ಮ ಸತತ ಅಭ್ಯಾಸದ ಫಲವಾಗಿ 2006-07 ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಗೊಂಡರು.

ಅಪಾರವಾದ ಭಾಷ ಜ್ಞಾನ ಮತ್ತು ಸಾಹಿತ್ಯಾಸಕ್ತಿ ಹೊಂದಿದ ಪ್ರೋ.ಡಾ.ಎಸ್.ಕರಿಗೂಳಿ:

ಕಾಲೇಜಿನ ದಿನಗಳಿಂದಲೂ ವಿಶೇಷ ಕೌಶಲ್ಯ ಹೊಂದಿದ ಇವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಅಪಾರವಾರದ ಜ್ಞಾನವನ್ನು ಪಡೆದುಕೊಂಡಿದ್ದಾರೆ . ಆಂಗ್ಲಭಾಷೆಯಲ್ಲಿ ಮಾತನಾಡುವಂತಹದಗಾಲಿ, ಕನ್ನಡ ಸಾಹಿತ್ಯ ಲೋಕದಲ್ಲಿ ಕವಿತೆ , ಕವನಗಳನ್ನು ಬರೆಯುವುದರೊಂದಿಗೆ ಒಬ್ಬ ಸಾಹಿತಿ ಮತ್ತು ಕವಿಯಾಗಿ ತಮ್ಮ ವ್ಯಕ್ತಿತ್ವವನ್ನು ತಾವೇ ರೂಪಿಸಿಕೊಂಡವರಾಗಿದ್ದಾರೆ. ಇನ್ನೂ ತಾವು ನಿರ್ವಹಿಸುತ್ತಿರುವ ವೃತ್ತಿಯಲ್ಲಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಜೊತೆಗೆ ವಿದ್ಯಾರ್ಥಿಗಳಲ್ಲಿ ಕೌಶಲ್ಯಾಧಾರಿತ ಶಿಕ್ಷಣವನ್ನು ಒದಗಿಸಿಕೊಡುವುದರಲ್ಲಿ ಮಹತ್ವದ ಪಾತ್ರವನ್ನು ವಹಿಸಿಕೊಂಡಿದ್ದಾರೆ.ತಮ್ಮ ವಿಶೇಷ ಕೌಶಲ್ಯದಿಂದ ವಿದ್ಯಾರ್ಥಿಗಳ ನೆಚ್ಚಿನ ಗುರುಳಾಗಿರುವ ಪ್ರೋ

3ನೇ ಪುಟಕ್ಕೆ

350 -400 ಕುಟುಂಬಗಳ ಬದುಕಿಗೆ ಆಸರೆ: ತರಕಾರಿ ಮಾರುಕಟ್ಟೆಗೆ ಶಾಶ್ವತ ಸ್ಥಳ ನೀಡಲು ಆಗ್ರಹ

ರಾಯಚೂರು, ಜೂ.17:-

ನಗರದ ವಿವಿಧ ಭಾಗಗಳಲ್ಲಿ ತರಕಾರಿ ಮಾರಾಟ ಮಾಡಿಕೊಂಡು ಜೀವನ ಸಾಗಿಸುತ್ತಿರುವ ನೂರಾರು ವ್ಯಾಪಾರಿಗಳು ಹಾಗೂ ಅವರ ಕುಟುಂಬಗಳಿಗೆ ಶಾಶ್ವತ ಜೀವನೋಪಾಯ ಕಲ್ಪಿಸುವ ಉದ್ದೇಶದಿಂದ ತರಕಾರಿ ಮಾರುಕಟ್ಟೆಗೆ ಪ್ರತ್ಯೇಕ ಸ್ಥಳ ಮೀಸಲಿಟ್ಟು ಮೂಲಸೌಕರ್ಯ ಕಲ್ಪಿಸುವಂತೆ ರಾಯಚೂರು ಮಹಾನಗರ ಪಾಲಿಕೆಗೆ ಮನವಿ ಸಲ್ಲಿಸಲಾಯಿತು.



ವ್ಯಾಪಾರಿಗಳ ಪ್ರತಿನಿಧಿಗಳು ಮಾತನಾಡಿ, ಹಲವು ವರ್ಷಗಳಿಂದ ನಗರದಲ್ಲಿ ತರಕಾರಿ ವ್ಯಾಪಾರ ನಡೆಸುತ್ತಿದ್ದು ಸಾರ್ವಜನಿಕರಿಗೆ ಯಾವುದೇ ತೊಂದರೆ ಅಥವಾ ನಷ್ಟ ಉಂಟುಮಾಡಿಲ್ಲ ಎಂದು ತಿಳಿಸಿದರು. ಮಹಾನಗರ ಪಾಲಿಕೆ ವಿಧಿಸುವ ತೆರಿಗೆ ಮತ್ತು ನಿಯಮಗಳನ್ನು ಪಾಲಿಸಲು ಸಿದ್ಧರಾಗಿದ್ದೇವೆ ಎಂದರು.

ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿ ಪೀಠನಲ್ಲಿ ವಿಚಾರಣೆಯಲ್ಲಿರುವ W.P. No.203741/2025 ಪ್ರಕರಣದ ಆದೇಶದ ಅನುಸಾರ, ನಗರದ ರೇಡಿಯೋ ಸ್ಟೇಷನ್ ರಸ್ತೆ ಪಕ್ಕದಲ್ಲಿ ನಡೆಯುತ್ತಿರುವ ತರಕಾರಿ

3ನೇ ಪುಟಕ್ಕೆ

ಸರ್ಕಾರಿ ಶಾಲೆಗಳ ವಿಲೀನ ವಿರೋಧಿಸಿ ಎಐಡಿಎಸ್‌ಒ ಪ್ರತಿಭಟನೆ

ರಾಯಚೂರು, ಜೂ.17-

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಯೋಜನೆಯ ನೆಪದಲ್ಲಿ ನಗರ ಹಾಗೂ ಗ್ರಾಮೀಣ ಭಾಗಗಳ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಕ್ರಮವನ್ನು ಕೈಬಿಟ್ಟು, ಶಿಕ್ಷಣ ಕ್ಷೇತ್ರದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಆಗ್ರಹಿಸಿ ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಾಲೆ ಉಳಿಸಿ ಸಮಿತಿಯ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.



ನಗರ ಮತ್ತು ಗ್ರಾಮೀಣ ವ್ಯಾಪ್ತಿಯ ಅಂದ್ರೂನ್ ಖಿಲ್ಲಾ, ಬಾಲಕಿಯರ ಉರ್ದು ಪ್ರೌಢಶಾಲೆ ಕೋಟೆ, ಅಸ್ಕಿಹಾಳ್, ಆಶ್ರಯ ಕಾಲೋನಿ, ಶ್ರೀರಾಮನಗರ ಕ್ಯಾಂಪ್, ವಿಜಯನಗರ ಕ್ಯಾಂಪ್, ಗೋಲ್ ಮಾರ್ಕೇಟ್, ದೇವರ ಕಾಲೋನಿ, ಕುಲಸುಂಬಿ ಕಾಲೋನಿ ಹಾಗೂ ಮಲಿಯಾಬಾದ್ ಕ್ಯಾಂಪ್ ಸೇರಿದಂತೆ ಹಲವು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಯತ್ನ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಯೋಜನೆಯಿಂದ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ಶಾಲೆಗಳನ್ನು ಮುಚ್ಚುವುದರಿಂದ ಅನೇಕ ಮಕ್ಕಳು ಶಿಕ್ಷಣದಿಂದ ದೂರವಾಗುವ ಅಪಾಯ ಎದುರಾಗಿದ್ದು, ಇದು ಶಿಕ್ಷಣದ ಹಕ್ಕಿಗೆ ವಿರುದ್ಧವಾದ ಕ್ರಮವಾಗಿದೆ ಎಂದು ಸಂಘಟನೆಯ ಮುಖಂಡರು ಅಭಿಪ್ರಾಯಪಟ್ಟರು.

ಜಿಲ್ಲೆಯಲ್ಲಿ ಈಗಾಗಲೇ ಶಿಕ್ಷಣ ಕ್ಷೇತ್ರ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದೆ. ಮಂಜೂರಾದ ಹುದ್ದೆಗಳಲ್ಲಿ 5,624 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, 266 ಏಕೋಪಾಧ್ಯಾಯ ಶಾಲೆಗಳು ಕೇವಲ ಒಬ್ಬ ಶಿಕ್ಷಕರಿಂದಲೇ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ 874 ಶಾಲಾ ಶೌಚಾಲಯಗಳು ದುಸ್ಥಿತಿಯಲ್ಲಿದ್ದು, ವಿದ್ಯಾರ್ಥಿನಿಯರಿಗೆ ಅಗತ್ಯ ಸೌಲಭ್ಯಗಳ ಕೊರತೆ ಇದೆ ಎಂದು ದೂರಿದರು.

ಅಸ್ಕಿಹಾಳ ಸರ್ಕಾರಿ ಪ್ರಾಥಮಿಕ ಶಾಲೆಯ ಕಟ್ಟಡ ನಿರ್ಮಾಣವನ್ನು ತಕ್ಷಣ ಆರಂಭಿಸಬೇಕು. ಅಲ್ಲಿಯವರೆಗೆ ಮಕ್ಕಳಿಗೆ ನಿರಂತರ ಶಿಕ್ಷಣ ದೊರೆಯುವಂತೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಬೇಕು. ವಿಜಯನಗರ ಕ್ಯಾಂಪ್‌ನ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಾಣ ಮಾಡಬೇಕು ಹಾಗೂ ಮಧ್ಯಂತರ ಅವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

3ನೇ ಪುಟಕ್ಕೆ

ಜೂ.20ರಂದು ಜಿಲ್ಲಾ ಪ್ರಥಮ ಕದಳಿ ಮಹಿಳಾ ಸಮ್ಮೇಳನ

ರಾಯಚೂರು, ಜೂ.17-

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಯೋಜನೆಯ ನೆಪದಲ್ಲಿ ನಗರ ಹಾಗೂ ಗ್ರಾಮೀಣ ಭಾಗಗಳ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಕ್ರಮವನ್ನು ಕೈಬಿಟ್ಟು, ಶಿಕ್ಷಣ ಕ್ಷೇತ್ರದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಆಗ್ರಹಿಸಿ ಎಐಡಿಎಸ್‌ಒ ಹಾಗೂ ಸಾರ್ವಜನಿಕ ಶಾಲೆ ಉಳಿಸಿ ಸಮಿತಿಯ ನೇತೃತ್ವದಲ್ಲಿ ಮಂಗಳವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯಿತು.



ನಗರ ಮತ್ತು ಗ್ರಾಮೀಣ ವ್ಯಾಪ್ತಿಯ ಅಂದ್ರೂನ್ ಖಿಲ್ಲಾ, ಬಾಲಕಿಯರ ಉರ್ದು ಪ್ರೌಢಶಾಲೆ ಕೋಟೆ, ಅಸ್ಕಿಹಾಳ್, ಆಶ್ರಯ ಕಾಲೋನಿ, ಶ್ರೀರಾಮನಗರ ಕ್ಯಾಂಪ್, ವಿಜಯನಗರ ಕ್ಯಾಂಪ್, ಗೋಲ್ ಮಾರ್ಕೇಟ್, ದೇವರ ಕಾಲೋನಿ, ಕುಲಸುಂಬಿ ಕಾಲೋನಿ ಹಾಗೂ ಮಲಿಯಾಬಾದ್ ಕ್ಯಾಂಪ್ ಸೇರಿದಂತೆ ಹಲವು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಯತ್ನ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಯೋಜನೆಯಿಂದ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಧಕ್ಕೆಯಾಗುವ ಸಾಧ್ಯತೆ ಇದೆ. ಶಾಲೆಗಳನ್ನು ಮುಚ್ಚುವುದರಿಂದ ಅನೇಕ ಮಕ್ಕಳು ಶಿಕ್ಷಣದಿಂದ ದೂರವಾಗುವ ಅಪಾಯ ಎದುರಾಗಿದ್ದು, ಇದು ಶಿಕ್ಷಣದ ಹಕ್ಕಿಗೆ ವಿರುದ್ಧವಾದ ಕ್ರಮವಾಗಿದೆ ಎಂದು ಸಂಘಟನೆಯ ಮುಖಂಡರು ಅಭಿಪ್ರಾಯಪಟ್ಟರು.

ಜಿಲ್ಲೆಯಲ್ಲಿ ಈಗಾಗಲೇ ಶಿಕ್ಷಣ ಕ್ಷೇತ್ರ ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದೆ. ಮಂಜೂರಾದ ಹುದ್ದೆಗಳಲ್ಲಿ 5,624 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, 266 ಏಕೋಪಾಧ್ಯಾಯ ಶಾಲೆಗಳು ಕೇವಲ ಒಬ್ಬ ಶಿಕ್ಷಕರಿಂದಲೇ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ 874 ಶಾಲಾ ಶೌಚಾಲಯಗಳು ದುಸ್ಥಿತಿಯಲ್ಲಿದ್ದು, ವಿದ್ಯಾರ್ಥಿನಿಯರಿಗೆ ಅಗತ್ಯ ಸೌಲಭ್ಯಗಳ ಕೊರತೆ ಇದೆ ಎಂದು ದೂರಿದರು.

ಅಸ್ಕಿಹಾಳ ಸರ್ಕಾರಿ ಪ್ರಾಥಮಿಕ ಶಾಲೆಯ ಕಟ್ಟಡ ನಿರ್ಮಾಣವನ್ನು ತಕ್ಷಣ ಆರಂಭಿಸಬೇಕು. ಅಲ್ಲಿಯವರೆಗೆ ಮಕ್ಕಳಿಗೆ ನಿರಂತರ ಶಿಕ್ಷಣ ದೊರೆಯುವಂತೆ ತಾತ್ಕಾಲಿಕ ವ್ಯವಸ್ಥೆ ಕಲ್ಪಿಸಬೇಕು. ವಿಜಯನಗರ ಕ್ಯಾಂಪ್‌ನ ಶಿಥಿಲಾವಸ್ಥೆಯಲ್ಲಿರುವ ಶಾಲಾ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡ ನಿರ್ಮಾಣ ಮಾಡಬೇಕು ಹಾಗೂ ಮಧ್ಯಂತರ ಅವಧಿಯಲ್ಲಿ ವಿದ್ಯಾರ್ಥಿಗಳ ಕಲಿಕೆಗೆ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.


ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟಕ್ಕೆ ಸಾಹಿತಿಗಳು, ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸಿದ್ದು, ಶಾಲೆಗಳ ವಿಲೀನ ಪ್ರಕ್ರಿಯೆಯನ್ನು ಸರ್ಕಾರ

3ನೇ ಪುಟಕ್ಕೆ


03 ಕುರಿ ಕಳ್ಳರ ಬಂಧನ: ₹1.20 ಲಕ್ಷ ನಗದು, 04 ಕುರಿಮರಿಗಳು ಹಾಗೂ ಬೈಕ್ ಜಪ್ತಿ

ರಾಯಚೂರು, ಜೂ.17

ಜಿಲ್ಲೆಯ ಬಳಗಾನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಕುರಿ ಕಳ್ಳತನ ಪ್ರಕರಣವನ್ನು ಭೇದಿಸಿರುವ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ, ₹1.20 ಲಕ್ಷ ನಗದು, 04 ಕುರಿಮರಿಗಳು ಹಾಗೂ ಒಂದು ಮೋಟಾರ್‌ಸೈಕಲ್‌ನ್ನು ಜಪ್ತಿ ಮಾಡಿದ್ದಾರೆ.


ಬಸವಲಿಂಗಪ್ಪ


ಶಿವರಾಜ


ನಾಗರಾಜ

ಜಾಲವಾಡಗಿ ಗ್ರಾಮದ ಕುರಿಹಟ್ಟಿಯಲ್ಲಿ ಮೇಯುತ್ತಿದ್ದ 08 ಕುರಿಗಳನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿದ್ದ ಕುರಿತು ಬಳಗಾನೂರು ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 103/2026ರಡಿ ಬಿಎನ್‌ಎಸ್ 2023ರ ಕಲಂ 303(2) ಅನ್ವಯ ಪ್ರಕರಣ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಕೈಗೊಂಡ ಪೊಲೀಸರು ಆರೋಪಿಗಳ ಪತ್ತೆಗೆ ವಿಶೇಷ ತಂಡವನ್ನು ರಚಿಸಿದ್ದರು.

ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಅರುಣಾಂಗ್ಷು ಗಿರಿ ಅವರ ನಿರ್ದೇಶನದಲ್ಲಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ಕುಮಾರಸ್ವಾಮಿ, ಜಿ. ಹರೀಶ್, ಡಿವೈಎಸ್‌ಪಿಯಾದ ಜಿ. ಚಂದ್ರಶೇಖರ್ ಹಾಗೂ ಸಿಪಿಐ ವಿನಾಯಕ ಅವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಎರಿಯಪ್ಪ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತು.

ತನಿಖೆಯ ವೇಳೆ ಇರಕಲ್ ಗ್ರಾಮದ ಬಸವಲಿಂಗಪ್ಪ, ಶಿವರಾಜ ಹಾಗೂ ದಿನ್ನಿ ಗ್ರಾಮದ ನಾಗರಾಜ ಎಂಬ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳಿಂದ ಕಳುವು ಮಾಡಿದ 13 ಕುರಿಗಳ ಮಾರಾಟದಿಂದ ಬಂದಿರಬಹುದಾದ ₹1.20 ಲಕ್ಷ ನಗದು, 04 ಕುರಿಮರಿಗಳು ಹಾಗೂ ಒಂದು ಮೋಟಾರ್‌ಸೈಕಲ್‌ನ್ನು ವಶಪಡಿಸಿಕೊಳ್ಳಲಾಗಿದೆ.

ಪ್ರಕರಣದ ತನಿಖೆ ಮುಂದುವರಿದಿದ್ದು, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ

3ನೇ ಪುಟಕ್ಕೆ

ಜೂನ್ 21 ರಂದು ವಿಶ್ವ ಯೋಗ ದಿನಾಚರಣೆ ಪೂರ್ವಭಾವಿ ಸಭೆ

ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ಧಿಗೆ ಅತ್ಯಂತ ಪರಿಣಾಮಕಾರಿಯಾಗಿದೆ-ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ



ಕಲಬುರಗಿ, ಜೂ.17-

ಯೋಗವು ದೈಹಿಕ ಹಾಗೂ ಮಾನಸಿಕ ಆರೋಗ್ಯ ವೃದ್ದಿಗೆ ಅತ್ಯಂತ ಪರಿಣಾಮಕಾರಿ ಸಾಧನವಾಗಿದ್ದು, ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಹೇಳಿದರು.

ಇತ್ತೀಚಿಗೆ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾಧಿಕಾರಿಗಳು, ಜೂನ್ 21 ರಂದು ಬೆಳಿಗ್ಗೆ 7 ಗಂಟೆಯಿಂದ 7:45 ರವರೆಗೆ ನಗರದ ಡಾ. ಚಂದ್ರಶೇಖರ್ ಪಾಟೀಲ್ ಕ್ರೀಡಾಂಗಣದಲ್ಲಿ ಬೃಹತ್ ಯೋಗ ಪ್ರದರ್ಶನ ಕಾರ್ಯಕ್ರಮಕ್ಕೆ ಬರುವ ಶಾಲಾ-ಕಾಲೇಜು ವಿದ್ಯಾರ್ಥಿಗಳು ಸಾರ್ವಜನಿಕರು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿಗಳು ಬೆಳಿಗ್ಗೆ 6:30ರ ಒಳಗಾಗಿ ಕ್ರೀಡಾಂಗಣ ತಲುಪಿ ನಿಯೋಜಿತ ಜಾಗಗಳಲ್ಲಿ ಸಿದ್ದರಿರಬೇಕು ತಿಳಿಸಿದರು,

ಕ್ರೀಡಾಂಗಣದಲ್ಲಿ ಯೋಗಾಸನಕ್ಕೆ ಮ್ಯಾಟ್‌ಗಳ ಅಳವಡಿಕೆ, ಶುದ್ದ ಕುಡಿಯುವ ನೀರಿನ ಸೌಲಭ್ಯ, ತುರ್ತು ಚಿಕಿತ್ಸೆ ಗಾಗಿ ಆಂಬುಲೆನ್ಸ್ ವ್ಯವಸ್ಥೆ ಹಾಗೂ ಸೂಕ್ತ ಪೊಲೀಸ್ ಭದ್ರತೆಯನ್ನು ಕಲ್ಪಿಸಬೇಕು. ಕ್ರೀಡಾಂಗಣದಲ್ಲಿ ಬೆಳೆದಿರುವ ಹುಲ್ಲನ್ನು ಸಣ್ಣದಾಗಿ ಕತ್ತರಿಸಿ ಇಡೀ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಮಹಾನಗರ ಪಾಲಿಕೆ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇ ಶನ ನೀಡಿದರು. ತೋಟಗಾರಿಕೆ ಇಲಾಖೆಯಿಂದ ಕ್ರೀಡಾಂಗಣದ ಸೌಂದರ್ಯೀಕರಣಕ್ಕಾಗಿ 50 ಅಲಂಕಾರಿಕ ಗಿಡಗಳ ಕುಂಡಗಳನ್ನು ಒದಗಿಸುವಂತೆ ತಿಳಿಸಿದರು.

ಗಿನ್ನೆಸ್ ವಿಶ್ವ ದಾಖಲೆಯ ಪ್ರಯತ್ನ: ಜೂನ್ 14 ರಂದು ಆನ್‌ಲೈನ್ ಮೂಲಕ ಯೋಗದ ಗಿನ್ನೆಸ್ ವಿಶ್ವ ದಾಖಲೆಯ ಮಹತ್ತರ ಪ್ರಯತ್ನ ವೊಂದು ನಡೆಯುತ್ತಿದ್ದು, ಜಿಲ್ಲೆಯಿಂದ ಗರಿಷ್ಠ ಸಂಖ್ಯೆಯ ನೋಂದಣಿ ದಾಖಲಾಗಬೇಕಿದೆ. ಇದಕ್ಕಾಗಿ ವೆಬ್ ಪೋರ್ಟಲ್ ಲಿಂಕ್ ಅನ್ನು ಎಲ್ಲಾ ಇಲಾಖೆಗಳ ಗ್ರೂಪ್‌ಗಳಲ್ಲಿ ಹಂಚಿಕೊಳ್ಳಬೇಕು. ವಿಶೇಷವಾಗಿ ಶಿಕ್ಷಣ ಇಲಾಖೆ (ಶಾಲೆಗಳು), ಸಮಾಜ ಕಲ್ಯಾಣ ಇಲಾಖೆ (ವಸತಿ ನಿಲಯಗಳು) ಮತ್ತು ಪೊಲೀಸ್ ಇಲಾಖೆಯ ಸಿಬ್ಬಂದಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಹಾಗೂ ಯೋಗ ಮಾಡುವಾಗ ತೆಗೆದ ಫೋಟೋಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಕಟ್ಟುನಿಟ್ಟಾಗಿ ಆದೇಶಿಸಿದರು. ಜೂನ್ 19 ರಂದು ಬೃಹತ್ 'ಯೋಗ ನಡಿಗೆ':★

ಮುಖ್ಯ ಕಾರ್ಯಕ್ರಮದ ಮುನ್ನೋಡಿಯಾಗಿ ಜೂನ್ 19 ರಂದು ಬೆಳಿಗ್ಗೆ 9:30 ಕ್ಕೆ ನಗರದಲ್ಲಿ 'ಯೋಗ ನಡಿಗೆ' (ರನ್ ಫಾರ್ ಯೋಗ) ಆಯೋಜಿಸಲಾಗಿದೆ. ಈ ನಡಿಗೆಯು ಜಗತ್ ವೃತ್ತದಿಂದ ಆರಂಭವಾಗಿ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದ ಮಾರ್ಗವಾಗಿ ಜಿಲ್ಲಾಧಿಕಾರಿಗಳ ಕಚೇರಿಯ ವರೆಗೆ ಸಾಗಲಿದೆ. ಜಿಲ್ಲೆಯ ಜನಸಾಮಾನ್ಯರು, ಯೋಗಾಸಕ್ತರು ಮತ್ತು ಸಂಘ-ಸಂಸ್ಥೆಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

ಇದೇ ಸಂದರ್ಭದಲ್ಲಿ ಪ್ರೊಬೇಷನರಿ ಐ.ಎ.ಎಸ್. ಶಿಖರ್ ಮೋಘ, ಡಿಯುಡಿಸಿ ಜಿಲ್ಲಾ ಯೋಜನಾ ನಿರ್ದೇಶಕ ಮುನ್ನವರ ದೌಲಾ, ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪನಿರ್ದೇಶ ರಾಜಕುಮಾರ ರಾಠೋಡ, ಯುವ ಜನಸೇವಾ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಸಂಗಮೇಶ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಶಂಕ್ರಮ್ಮ ಡವಳಗಿ, ಜಿಲ್ಲಾ ಆಯುಷ್? ಇಲಾಖೆಯ ಅಧಿಕಾರಿ ಡಾ. ಕೆ.ಬಿ. ಬಬಲಾದಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ಸೇರಿದಂತೆ ಮಹಾನಗರ ಪಾಲಿಕೆಯ ಅಧಿಕಾರಿಗಳು ಪೊಲೀಸ್ ಇಲಾಖೆಯ ಅಧಿಕಾರಿಗಳು ಬಸವೇಶ್ವರ ಆಯುರ್ವೇಧಿಕ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ, ಪ್ರಾಂಶುಪಾಲರು ವಿವಿಧ ಇಲಾಖೆ ಯ ಪ್ರಾಂಶುಪಾಲರು, ಪತಂಜಲಿ ಯೋಜನಾ ಸಮಿತಿ ಅಧ್ಯಕ್ಷರು ಹಾಗೂ ಇತರರು ಭಾಗವಹಿಸಿದ್ದರು.



ಮಹಿಳಾ ದೌರ್ಜನ್ಯ ತಡೆಗೆ ಜಾಗೃತಿ ಅಗತ್ಯ: ಬಸೀರಾ ಗೊಟ್ಯಾಳ

ಅಫಜಲಪುರ,ಜೂ.17-

ತಾಲೂಕಿನ ಮಲ್ಲಾಬಾದ್ ಗ್ರಾಮದಲ್ಲಿ ವಿ.ಕೆ.ಜಿ. ಸಾಂತ್ವನ ಸಹಾಯವಾಣಿ ಕೇಂದ್ರ, ಅಫಜಲಪುರ ವತಿಯಿಂದ ಮಹಿಳಾ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕರಾದ ಬಸೀರಾ ಗೊಟ್ಯಾಳ ಅವರು ಮಹಿಳಾ ದೌರ್ಜನ್ಯ, ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳ ಕುರಿತು ಮಹಿಳೆಯರಿಗೆ ಸರಳವಾಗಿ ಮಾಹಿತಿ ನೀಡಿದರು.

ಮಹಿಳಾ ದೌರ್ಜನ್ಯ ತಡೆಗಟ್ಟಲು ಜಾಗೃತಿ ಅತ್ಯಗತ್ಯವಾಗಿದ್ದು, ಮಹಿಳೆಯರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿರಬೇಕು ಎಂದು ತಿಳಿಸಿದರು. ಅಲ್ಲದೆ, ಇಂತಹ ಕೃತ್ಯಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತು ವಿವರಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖ್ಯಸ್ಥರು, ಸಮಿತಿ ಅಧ್ಯಕ್ಷರು ಹಾಗೂ ಹಿರಿಯ ಮುಖಂಡರು ಭಾಗವಹಿಸಿ ಮಹಿಳೆಯರ ಸಮಸ್ಯೆಗಳು, ಅವರ ಹಕ್ಕುಗಳು ಮತ್ತು ಸಮಾಜದಲ್ಲಿ ಮಹಿಳೆಯರ ಸುರಕ್ಷತೆಯ ಮಹತ್ವದ ಕುರಿತು ಮಾತನಾಡಿದರು.

ಗ್ರಾಮದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಹೆಚ್‌ಪಿವಿ ಲಸಿಕೆ ಕುರಿತು ಜಾಗೃತಿ ಕಾರ್ಯಕ್ರಮ

ವಿಜಯನಗರಜೂ.17-

ಜಿಲ್ಲೆಯ ಹೊಸಪೇಟೆ ನಗರದ ಪೂಲ್ ಬನ್ ಶಾಲೆಯಲ್ಲಿ 14 ರಿಂದ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಗರ್ಭಕಂಠದ ಕ್ಯಾನ್ಸ ರ್ ತಡೆಗಟ್ಟುವ ಉದ್ದೇಶದಿಂದ ನೀಡಲಾಗುವ ಹೆಚ್‌ಪಿವಿ () ಲಸಿಕೆ ಕುರಿತು ಶಿಕ್ಷಕರು ಹಾಗೂ ಪಾಲಕರಿಗೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ. ದೊಡಮನಿ ಅವರು ಹೆಚ್‌ಪಿವಿ ಲಸಿಕೆಯ ಮಹತ್ವ, ಅದರ ಅಗತ್ಯತೆ ಹಾಗೂ ಗರ್ಭಕಂಠದ ಕ್ಯಾನ್ಸ ರ್ ತಡೆಗಟ್ಟುವಲ್ಲಿ ಲಸಿಕೆಯ ಪಾತ್ರದ ಕುರಿತು ಸಮಗ್ರ ಮಾಹಿತಿ ನೀಡಿದರು.

ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಧರ್ಮನಗೌಡ ಮಾತನಾಡಿ, ಹೆಚ್‌ಪಿವಿ ಲಸಿಕೆ ಸುರಕ್ಷಿತವಾಗಿದ್ದು, ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸ ರ್ ಅಪಾಯವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ. ಪಾಲಕರು ಹಾಗೂ ಶಿಕ್ಷಕರು ಮಕ್ಕಳಿಗೆ ಲಸಿಕೆ ಪಡೆಯುವ ಕುರಿತು ಅರಿವು ಮೂಡಿಸಿ, ಲಸಿಕಾಕರಣ ಕಾರ್ಯಕ್ರಮಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು.



ಆಕಾಶವಾಣಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಅಶ್ವಿನಿ ಅವರು ಮಾತನಾಡಿ, ಹೆಚ್‌ಪಿವಿ ಲಸಿಕೆಯಿಂದ ಯಾವುದೇ ಗಂಭೀರ ದುಷ್ಪರಿಣಾಮಗಳಿಲ್ಲ. 14 ರಿಂದ 15 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳು ಕಡ್ಡಾಯವಾಗಿ ಲಸಿಕೆ ಪಡೆಯಬೇಕು. ಇದರಿಂದ ಗರ್ಭಕಂಠದ ಕ್ಯಾನ್ಸ ರ್ ಅನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಶ್ರೀಮತಿ ಉಮಾ ಅವರು ಶಾಲೆಯಲ್ಲಿರುವ ಅರ್ಹ ವಯೋಮಾನದ ಎಲ್ಲಾ ಮಕ್ಕಳಿಗೂ ತಪ್ಪದೇ ಲಸಿಕೆ ಹಾಕಿಸುವಂತೆ ಪಾಲಕರಿಗೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರು, ಪಾಲಕರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಭಾಗವಹಿಸಿ, ಹೆಚ್‌ಪಿವಿ ಲಸಿಕೆ ಕುರಿತು ಮಾಹಿತಿ ಪಡೆದುಕೊಂಡರು.

ಜೂನ್ 27 ರಂದು ಶ್ರೀ ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧಾರ

ಕಲಬುರಗಿ,ಜೂ.17-

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಶ್ರೀ ಕೆಂಪೇಗೌಡರ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ ಅವರ ಸಭೆಯಲ್ಲಿ ನಿರ್ಧರಿಸಲಾಯಿತು.

ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಇದೇ ಜೂನ್ 27 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಡಾ. ಎಸ್.ಎಂ ಪಂಡಿತ ರಂಗಮಂದಿರದಲ್ಲಿ ಶ್ರೀ ಕೆಂಪೇಗೌಡರ ಜಯಂತಿಯ ಕಾರ್ಯಕ್ರಮ ಜರುಗಲಿದ್ದು, ಈ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಹಾಗೂ ಸಮಾಜದ



ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಸೂಚಿಸಿದರು.

ಅಂದು ಬೆಳಿಗ್ಗೆ 9 ಗಂಟೆಗೆ ಕಡ್ಡಾಯವಾಗಿ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಜಯಂತಿ ಆಚರಿಸಬೇಕು. ಸಭೆಯಲ್ಲಿ ನುರಿತ ಉಪನ್ಯಾಸಕರನ್ನು ಸಹ ಆಹ್ವಾನಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದರ ಜೊತೆಗೆ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ (ಪ್ರಭಾರ) ಸಿದ್ದರಾಮ ಸಿಂದೆ ಅವರು ಮಾತನಾಡಿ,

ಪ್ರೋಟೋಕಾಲ್ ಪ್ರಕಾರ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ನಾಡಗೀತೆ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಯಂತಿ ಸಮಿತಿ ಅಧ್ಯಕ್ಷರಾಗಿ ಶಿವಯೋಗಪ್ಪ ಚಿತ್ತಾಪುರ ಗುಂಡಗುರ್ತಿ ಅವರನ್ನು ಆಯ್ಕೆ ಮಾಡಲಾಯಿತು. ಉಪನ್ಯಾಸಕರಾಗಿ ಅಣ್ಣಾರಾವ್ ದುಗೊಂಡ ಹಾಗೂ ಗುರುನಾಥ ದೇಸಾಯಿ ಕಾರ್ಯಕ್ರಮದ ನಿರೂಪಕರನ್ನಾಗಿ ಆಯ್ಕೆ ಮಾಡಲಾಯಿತು.

ವೇದಿಕೆ ಮೇಲೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರಾದ ನಾಗಣ್ಣ ಬಿ.ಪಾಟೀಲ್, ನಾಗಪ್ಪ ಮೋಗಾ, ಶರಣಗೌಡ ಪಾಟೀಲ್ ಪಟ್ಟಣ, ಅಣ್ಣಾರಾವ ಬಿ.ಪಾಟೀಲ್, ಮಲ್ಲಣ್ಣಗೌಡ, ಉಮೇಶ ಗೌಡ ಸೇರಿದಂತೆ ಇತರರು ಇದ್ದರು.

ಕಂಬದ ಗುಡಿಗೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಭೇಟಿ



ಚಿತ್ತಾಪುರ,ಜೂ.17-

ಪಟ್ಟಣದ ಹೊರವಲಯದಲ್ಲಿರುವ ರಾಷ್ಟ್ರ ಕೂಟರ ಕುಲದೇವತೆ ಎಂದೇ ಖ್ಯಾತಿ ಪಡೆದ ನಾಗಾವಿ ಯಲ್ಲಮ್ಮ ದೇವಸ್ಥಾನಕ್ಕೆ ಜಿಲ್ಲಾಧಿಕಾರಿ ಇಕ್ರಮ್ ಶರೀಫ್ ಅವರು ಭೇಟಿ ನೀಡಿದರು. ನಂತರ 60 ಕಂಬದ ದೇವಸ್ಥಾನ, ನಂದಿ ಬಾವಿ ಮತ್ತು ಸುತ್ತಲಿನ ದೇವಸ್ಥಾನಗಳಿಗೆ ಹಾಗೂ ಪುರಾತತ್ವ ಇಲಾಖೆಯ ಸ್ಥಳಗಳಿಗೆ ಭೇಟಿ ನೀಡಿದರು. ಪುರಾತತ್ವ ಇಲಾಖೆಯಿಂದ ನಡೆಯುತ್ತಿರುವ ಜಿರ್ಣೋದ್ದಾರ ಕಾಮಗಾರಿಗಳ ನೀಲ ನಕ್ಷೆ ಪರಿಶೀಲನೆ ಮಾಡಿದರು.

ಇದೇ ವೇಳೆ ದೇವಸ್ಥಾನ ಹಾಗೂ 60 ಕಂಬದ ದೇವಸ್ಥಾನ, ನಂದಿ ಬಾವಿಯ ವಿಶೇಷತೆಯ ಬಗ್ಗೆ ಮಾಹಿತಿ ಪಡೆದುಕೊಂಡರು.

ಈ ಸಂದರ್ಭದಲ್ಲಿ ಸೇಡಂ ಸಹಾಯಕ ಆಯುಕ್ತ ಪ್ರಭು ರೆಡ್ಡಿ, ಕಲಬುರಗಿ ಸಹಾಯಕ ಆಯುಕ್ತೆ ಸಾಹಿತ್ಯ ಆಲದಕಟ್ಟಿ, ತಹಶೀಲ್ದಾರ್ ನಾಗಯ್ಯ ಹಿರೇಮಠ, ಗ್ರೇಡ್ 2 ತಹಶೀಲ್ದಾರ್ ರಾಜಕುಮಾರ್ ಮರತೂರಕರ್‌ಪುರಸಭೆ ಮುಖ್ಯಾಧಿಕಾರಿ ಭಾರತಿ ದಂಡೋತಿ, ಪುರಾತತ್ವ ಹಾಗೂ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಸೇರಿದಂತೆ ತಾಲೂಕಿನ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.

ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ: 12 ದಿನಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಲು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಆದೇಶ

ಬಳ್ಳಾರಿ,ಜೂ.17-

ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳವನ್ನು ತಡೆಯಲು ಮತ್ತು ಸುರಕ್ಷಿತ ವಾತಾವರಣ ನಿರ್ಮಿಸಲು ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳು ಕಡ್ಡಾಯವಾಗಿ ಆಂತರಿಕ ದೂರು ಸಮಿತಿ ರಚಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಮಹಿಳೆಯರ ಉದ್ಯೋಗ ಸ್ಥಳದಲ್ಲಿ ಲೈಂಗಿಕ ಕಿರುಕುಳ ತಡೆ, ನಿಷೇಧ ಮತ್ತು ಪರಿಹಾರ ಕಾಯ್ದೆ-2013ರ ಕಲಂ 4ರ ಅನ್ವಯ 10 ಅಥವಾ ಅದಕ್ಕಿಂತ ಹೆಚ್ಚು ಸಿಬ್ಬಂದಿಯನ್ನು ಹೊಂದಿರುವ ಪ್ರತಿಯೊಂದು ಸರ್ಕಾರಿ,

ಅರೆ ಸರ್ಕಾರಿ ಕಚೇರಿ, ಇಲಾಖೆ, ಮಂಡಳಿ, ನಿಗಮ, ಸ್ಥಳೀಯ ಸಂಸ್ಥೆ ಹಾಗೂ ಖಾಸಗಿ ಸಂಸ್ಥೆಗಳಲ್ಲಿ ಈ



ಸಮಿತಿ ರಚನೆ ಕಡ್ಡಾಯವಾಗಿದೆ.

ಆದಾಗ್ಯೂ ಜಿಲ್ಲೆಯ ಹಲವು ಕಚೇರಿಗಳು, ಶಾಲಾ-ಕಾಲೇಜುಗಳು, ಫ್ಯಾಕ್ಟರಿಗಳು, ವ್ಯಾಪಾರ ಮಳಿಗೆಗಳು, ಗಾರ್ಮೆಂಟ್ಸ್ ಹಾಗೂ ಬ್ಯಾಂಕುಗಳು ಇನ್ನು ಕಡ್ಡಾಯ ಸಮಿತಿ ರಚಿಸದಿರುವುದು ಅಥವಾ ವಿವರಗಳನ್ನು -' ಪೋರ್ಟಲ್‌ನಲ್ಲಿ ನೋಂದಾಯಿಸದಿರುವುದು ಗಮನಕ್ಕೆ ಬಂದಿದೆ.

★12 ದಿನಗಳ ಗಡುವು:★

12 ದಿನಗಳ ಒಳಗಾಗಿ ಎಲ್ಲಾ ಇಲಾಖಾ ಮುಖ್ಯಸ್ಥರು ತಮ್ಮ ವ್ಯಾಪ್ತಿಯಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸಬೇಕು. ಸಮಿತಿ ರಚನೆಯ ಆದೇಶದ ಪ್ರತಿ, ಸದಸ್ಯರ ವಿವರಗಳು ಹಾಗೂ 2025ರ ವಾರ್ಷಿಕ ವರದಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ

ಉಪನಿರ್ದೇಶಕರ ಕಚೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಯವರು ಗಡುವು ನೀಡಿದ್ದು, ಒಂದು ವೇಳೆ ನಿಗದಿತ ಅವಧಿಯೊಳಗೆ ಸಮಿತಿ ರಚಿಸಿ ವರದಿ ಸಲ್ಲಿಸದಿದ್ದರೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ನಿಯಮ ಪಾಲಿಸದ ಕಚೇರಿ ಮುಖ್ಯಸ್ಥರಿಗೆ ತಕ್ಷಣವೇ ಶೋಕಾಸ್ ನೋಟಿಸ್' ಜಾರಿ ಮಾಡಲಾಗುವುದು. ನಿಯಮ ಉಲ್ಲಂಘನೆಯ ಕುರಿತು ರಾಜ್ಯ ಮಟ್ಟದ ಹಿರಿಯ ಅಧಿಕಾರಿಗಳಿಗೆ ವರದಿ ಕಳುಹಿಸಲಾಗುವುದು. ಕಾಯ್ದೆಯ ಕಲಂ 26ರ ಅಡಿಯಲ್ಲಿ ಸಂಬಧಪಟ್ಟ ಸಂಸ್ಥೆ ಅಥವಾ ಮಾಲೀಕರ ವಿರುದ್ಧ ದಂಡಾತ್ಮಕ ಕಾನೂನು ಕ್ರಮ ಜರುಗಿಸಲಾಗುವುದು.

ಮಹಿಳಾ ಸಿಬ್ಬಂದಿಗೆ ದೂರು ಸಲ್ಲಿಸಲು ಸೂಕ್ತ ವೇದಿಕೆ ಇಲ್ಲದ ಕಾರಣ ಏನಾದರೂ ಸಮಸ್ಯೆಯಾದರೆ, ಅದರಿಂದ ಉಂಟಾಗುವ ಆಡಳಿತಾತ್ಮಕ ಮತ್ತು ಕಾನೂನು ಹೊಣೆಗಾರಿಕೆಯನ್ನು ಆಯಾ

ಕಚೇರಿ ಮುಖ್ಯಸ್ಥರೇ ವೈಯಕ್ತಿಕವಾಗಿ ಹೊರಬೇಕಾಗುತ್ತದೆ. ಈ ಆದೇಶವನ್ನು ಅತ್ಯಂತ ತುರ್ತು ಎಂದು ಪರಿಗಣಿಸಿ, ನಿಗದಿತ ಅವಧಿಯೊಳಗೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂಸ್ವಾಧೀನ, ಗಣಿಗಾರಿಕೆ ವಿರೋಧಿಸಿ ರೈತರಿಂದ ಪ್ರತಿಭಟನೆ

ಸಂಡೂರು/ಬಳ್ಳಾರಿ,ಜೂ.17-

ತಾಲೂಕಿನ ಸೋಮಲಾಪುರ ಗ್ರಾಮದಿಂದ ತಾಲೂಕು ಕಚೇರಿವರೆಗೆ ಕರ್ನಾಟಕ ರಾಜ್ಯ ರೈತ ಸಂಘ, ಜನಸಂಗ್ರಾಮ ಪರಿಷತ್ ಹಾಗೂ ವಿವಿಧ ರೈತ ಸಂಘಟನೆಗಳ ನೇತೃತ್ವದಲ್ಲಿ ಎತ್ತಿನ ಬಂಡಿ, ಬೈಕ್ ಹಾಗೂ ಟ್ರ್ಯಾಕ್ಟರ್ ಜಾಥಾ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲಾಯಿತು.

ಜಾಥಾದ ಬಳಿಕ ತಹಶೀಲ್ದಾರರ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದ ರೈತರು, ಸಂಡೂರು ತಾಲೂಕಿನಲ್ಲಿ ನಿರಂತರ ಗಣಿಗಾರಿಕೆ ಮತ್ತು ಕೈಗಾರಿಕಾ ವಿಸ್ತರಣೆಯಿಂದ ರೈತರ ಫಲವತ್ತಾದ ಭೂಮಿ, ಅರಣ್ಯ, ಪರಿಸರ ಹಾಗೂ ಜಲಸಂಪನ್ಮೂಲಗಳಿಗೆ ಗಂಭೀರ ಹಾನಿಯಾಗುತ್ತಿದೆ ಎಂದು



ಆರೋಪಿಸಿದರು.

ಯಶವಂತನಗರ ಸೋಮಲಾಪುರ ಪ್ರದೇಶದಲ್ಲಿ ರೈತರ ವಿರೋಧದ ನಡುವೆಯೇ ಎಂಎಸ್‌ಪಿಎಲ್ ಹಾಗೂ ಆರ್‌ಪಿಸಿಎಲ್ (ಬಿಕೆಜಿ) ಸೇರಿ ಬೃಹತ್ ಕೈಗಾರಿಕೆಗಳಿಗೆ ಭೂಮಿ ನೀಡಲಾಗುತ್ತಿದೆ. ಇದರಿಂದ ಫಲವತ್ತಾದ ಕೃಷಿ ಭೂಮಿ ಮತ್ತು ಪ್ರಸಿದ್ಧ ಮಾವು ಬೆಳೆ ಪ್ರದೇಶಗಳು ನ ಕೈಗಾರಿಕೆಗಳಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದ್ದು, ಅರಣ್ಯ ನಾಶ, ಜಲಮೂಲಗಳ ಹಾನಿ ಹಾಗೂ ಕೃಷಿ ಉತ್ಪಾದನೆ ಕುಸಿತದಂತಹ ಸಮಸ್ಯೆಗಳು ಎದುರಾಗಿವೆ. ಯಶವಂತನಗರ ಮತ್ತು ಕುಂಟೇನಹಳ್ಳಿ ಭಾಗಗಳಲ್ಲಿ ಭಾರೀ ವಾಹನಗಳ ಸಂಚಾರದಿಂದ ಧೂಳು ಹೆಚ್ಚಾಗಿ ಬೆಳೆಗಳಿಗೆ ಹಾನಿಯಾಗುತ್ತಿದ್ದು, ಮಾವು ಉತ್ಪಾದನೆ ಮೇಲೂ ದುಷ್ಪರಿಣಾಮ ಉಂಟಾಗಿದೆ. ಆದ್ದರಿಂದ ಲಾರಿಗಳ ಸಂಚಾರಕ್ಕೆ ಪರ್ಯಾಯ ರಸ್ತೆ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಹೈಕೋರ್ಟ್ ಆದೇಶದಂತೆ ರೈತರ ಹೆಸರನ್ನು ಪಹಣಿಯಲ್ಲಿ ಪುನಃ ದಾಖಲಿಸಬೇಕು. ಮುಂದಿನ ದಿನಗಳಲ್ಲಿ ರೈತರ ಭೂಮಿಯನ್ನು ಯಾವುದೇ ಕಾರಣಕ್ಕೂ ಸ್ವಾಧೀನ 'ಪಡಿಸಿಕೊಳ್ಳಬಾರದು. ಜೊತೆಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ನಿಧಿ, ಡಿಎಂಎಫ್, ಸಿಎಸ್‌ಆರ್ ಹಾಗೂ ಕೆಎಂಇಆರ್‌ಸಿ ನಿಧಿಗಳನ್ನು ಕೃಷಿ, ಶಿಕ್ಷಣ, ಉದ್ಯೋಗ ಮತ್ತು ನೀರಾವರಿ ಅಭಿವೃದ್ಧಿಗೆ ಬಳಸಬೇಕು ಎಂದು ಆಗ್ರಹಿಸಿದರು. ತುಂಗಭದ್ರಾ ಹಿನ್ನೀರಿನಿಂದ ತಾಲೂಕಿನ ಕೆರೆಗಳನ್ನು ತುಂಬಿಸುವ ಯೋಜನೆ ಜಾರಿಗೊಳಿಸಿ, ಕೆರೆಗಳ ಹೂಳೆತ್ತುವ ಕಾಮಗಾರಿ ಕೈಗೊಂಡರೆ ರೈತರಿಗೆ ಹಾಗೂ ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಯಾಗುವುದರ ಜೊತೆಗೆ ಕೃಷಿ ಚಟುವಟಿಕೆಗಳಿಗೆ ಉತ್ತೇಜನ ದೊರೆಯಲಿದೆ ಎಂದು ಅಭಿಪ್ರಾಯಪಟ್ಟರು.


ಮನವಿ ಸ್ವೀಕರಿಸಿದ ತಹಶೀಲ್ದಾರ ಅನಿಲ್ ಕುಮಾರ್ ರೈತರ ಬೇಡಿಕೆಗಳನ್ನು ಸರ್ಕಾರ ಹಾಗೂ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಸಂಗೋಳಗಿ(ಸಿ) ಶಾಲೆ (ಬಳಕೆಯಲ್ಲಿಲ್ಲದ ಕೊಠಡಿ) ಮೇಲ್ಚಾವಣಿ ಪದರು ಕುಸಿತ: ಯಾವುದೇ ಅವಘಡ ಸಂಭವಿಸಿಲ್ಲ

ಕಲಬುರಗಿ,ಜೂ.17-

ಜಿಲ್ಲೆಯ ಆಳಂದ ತಾಲೂಕಿನ ಸಂಗೋಳಗಿ(ಸಿ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ (ಬಳಕೆಯಲ್ಲಿಲ್ಲದ ಕೊಠಡಿ) ಮೇಲ್ಚಾವಣಿಯ ಪದರು ಭಾನುವಾರ ಬೆಳಿಗ್ಗೆ ಏಕಾಏಕಿ ಕುಸಿದು ಬಿದ್ದಿದ್ದು, ಯಾವುದೇ ಅವಘಡ ಸಂಭವಿಸಿಲ್ಲ ಎಂದು ಶಾಲೆಯ ಮುಖ್ಯಗುರುಗಳು ಮತ್ತು ಚಿಂಚನಸೂರು ಸಿ.ಆರ್.ಪಿ ಅವರು ತಿಳಿಸಿದ್ದಾರೆ.

ಭಾನುವಾರ ರಜೆ ದಿನವಾಗಿದ್ದರಿಂದ ಶಾಲೆಯಲ್ಲಿ ಮಕ್ಕಳು, ಶಿಕ್ಷಕರು ಯಾರು ಇರಲಿಲ್ಲ. ಬೆಳಿಗ್ಗೆ ಸುಮಾರು 6 ಗಂಟೆಗೆ ಬಳಕೆಯಲ್ಲಿಲ್ಲದ ಈ ಕೊಠಡಿ



ಅವಘಡಕ್ಕೆ ತುತ್ತಾಗಿದೆ. ಸುಮಾರು 60-70 ವರ್ಷದ ಹಳೇ ಕಟ್ಟಡವಾಗಿದ್ದರಿಂದ ಪ್ಲಾಸ್ಟರ್ ಪದರು ಕುಸಿದಿರಬಹುದು ಎಂದು ಮುಖ್ಯಗುರು ಪುಷ್ಪಾ ಮತ್ತು ಸಿ.ಆರ್.ಪಿ ಧರ್ಮರಾಯ ಅವರು ಆಳಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ನೀಡಿದ್ದಾರೆ.

ಮೇಲ್ಚಾವಣಿಯ ಪದರು ಕುಸಿದ್ದ ಬಿದ್ದ ವಿಷಯ ತಿಳಿಯುತ್ತಿದ್ದಂತೆ ಸಿ.ಆರ್.ಪಿ ಮತ್ತು ಸಹ ಶಿಕ್ಷಕರೊಂದಿಗೆ ಶಾಲೆಗೆ ಜಂಟಿಯಾಗಿ ಭೇಟಿ ನೀಡಿ ಪರಿಶೀಲಿಸಿದ ಮುಖ್ಯಗುರುಗಳು, ಸದರಿ ಸ್ಥಳದ ಹತ್ತಿರ ಸಾರ್ವಜನಿಕರು, ಮಕ್ಕಳು ಸೇರಿದಂತೆ ಯಾರು ಹೋಗದಂತೆ ತಿಳಿ ಹೇಳಲಾಗಿದೆ ಎಂದಿದ್ದಾರೆ.

ಒಂದನೇಯ ಪುಟದಿಂದ

ಸಂಘಟಕ, ಯುವ ಸಾಹಿತಿ, ಶಿಕ್ಷಣ ಚಿಂತಕ, ಪ್ರೋಫೆಸರ್ ಈಗ ಡಾ.ಎಸ್.ಕರಿಗೂಳಿ.!!

ಡಾ.ಎಸ್.ಕರಿಗೂಳಿ ಅವರು ಪ್ರಸ್ತುತ ಗಂಗಾವತಿ ತಾಲುಕಿನ ಶ್ರೀ ರಾಮುನಗರದ ಸಿ ಎನ್ ಆರ್ ಸರ್ಕಾರಿ ಮಹಾವಿದ್ಯಾಲಯದ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಸಂಶೋಧನೆಯ ಸಾಧಕ ಪ್ರೋ.ಡಾ.ಎಸ್.ಕರಿಗೂಳಿ

ಈ ಮುಂಚೆ ಹೇಳಿದ ಹಾಗೆ ಮೋದಲಿನಿಂದಲೂ ವಿಶೇಷತೆಯನ್ನೇ ಹುಡುಕುವ ಮನಸ್ಥಿತಿ ಹೊಂದಿರುವ ಪ್ರೋಫೆಸರ್ ಬಹುಶಃ ಭಾರತದಲ್ಲಿಯೇ ಮೊದಲನೆಯದಾಗಿ '' ಆ್ಯನ್ ಎಂಪರಿಕಲ್ ಸ್ಟಡಿ ಅನ್ ಕ್ರಿಪ್ಟೋ ಕರೆನ್ಸಿ ವಿಥ್ ಸ್ಪೆಶಲ್ ರೆಫೆರೇನ್ಸ್ ಟು ಬಿಟ್ ಕಾಯಿನ್ ಅಂಡ್ ಎಥಿರಮ್ '' ಅನ್ನುವ ಮಹತ್ವದ ಸಂಶೋಧನಾ ವಿಷಯದ ಮೇಲೆ ಅಧ್ಯಯನ ಮಾಡಿದ್ದಾರೆ. ಪ್ರಸ್ತುತ ಜಗತ್ತಿನಲ್ಲಿ ನಡೆಯುತ್ತಿರುವ ಆರ್ಥಿಕ ವಹಿವಾಟಿನಲ್ಲಿ ಕ್ರಿಪ್ಟೋಕರೆನ್ಸಿ ಯ ಮಹತ್ವ ವೈಜ್ಞಾನಿಕ ಹಾಗೂ ಪ್ರಾಯೋಗಿಕ ಅಧ್ಯಯನ ನಡೆಸಿ ವಿಶ್ವವಿದ್ಯಾಲಯಕ್ಕೆ ವರದಿ ಸಲ್ಲಿಸಿದ್ದಾರೆ.

ಇವರ ಸಂಶೋಧನಾ ಪ್ರಬಂಧದ ಗುಣಮಟ್ಟ ಮತ್ತು ಅಧ್ಯಯನದ ಆಳವನ್ನು ಪರಿಗಣಿಸಿದ ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಸಿಂಡಿಕೇಟ್ ಸಭೆಯು ಪಿ ಹೆಚ್ ಡಿ ಪದವಿ ಪ್ರದಾನಕ್ಕೆ ಅನುಮೋದನೆ ನೀಡಿದೆ. ಇವರ ನಿರಂತರ ಪ್ರರಿಶ್ರಮದ ಫಲವಾಗಿ ಪ್ರೋ.ಎಸ್ .ಕರಿಗೂಳಿಅವರಿಗೆ ಬಳ್ಳಾರಿ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಡಾಕ್ಟರ್ ಆಫ್ ಫಿಲಾಸಫಿ (ಪಿಹೆಚ್ ಡಿ) ಪದವಿಯನ್ನು ಪ್ರಕಟಿಸಿ, ಅಧಿಕೃತವಾಗಿ ಡಾಕ್ಟರ್ ಆಫ್ ಫಿಲಾಸಫಿ ಪದವಿಗೆ ಅರ್ಹರಾಗಿದ್ದಾರೆ ಎಂದು ಘೋಷಿಸಿಸಲಾಗಿದೆ.

ಯುವ ವಿದ್ಯಾರ್ಥಿಗಳಲ್ಲಿ ಹೆಚ್ಚಿದ ಸಂತಸ.

ತಮ್ಮ ವಿಷೇಶ ವ್ಯಕ್ತಿತ್ವದಿಂದ ಅಚ್ಚು ಮೆಚ್ಚಿನ ಪ್ರೋಸರ್ ಆಗಿರುವ ಇವರು ಡಾಕ್ಟರೆಟ್ ಪದವಿಯನ್ನು ಇವರಿಗಿಂತ ಅವರ ವಿದ್ಯಾರ್ಥಿಗಳು ಸ್ನೇಹಿತರು ಹಿತೈಸಿಗಳು ಹೆಚ್ಚಾಗಿ ಸಂಭ್ರಮಿಸುತ್ತಿರುವುದು ಇನ್ನಷ್ಟು ಸಂತೋಷವನ್ನು ನೀಡಿದೆ ಎಂದು ಹೇಳುತ್ತಾರೆ ಡಾ.ಎಸ್.ಕರಿಗೂಳಿ ಅವರು. ಮುಂದಿನ ದಿನಮಾನಗಳಲ್ಲಿ ಶೈಕ್ಷಣಿಕ ವಿಚಾರವಾಗಿ ಇನ್ನೂ ಹೆಚ್ಚಾಗಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

350 -400 ಕುಟುಂಬಗಳ ಬದುಕಿಗೆ ಆಸರೆ: ತರಕಾರಿ ಮಾರುಕಟ್ಟೆಗೆ ಶಾಶ್ವತ ಸ್ಥಳ ನೀಡಲು ಆಗ್ರಹ

ವ್ಯಾಪಾರವನ್ನು ಮುಂದುವರಿಸಲು ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಪ್ರಸ್ತುತ ಸುಮಾರು 350ರಿಂದ 400 ಕುಟುಂಬಗಳು ಪ್ರತಿದಿನ ಬೆಳಿಗ್ಗೆ 3 ಗಂಟೆಯಿಂದ 9 ಗಂಟೆಯವರೆಗೆ ನಡೆಯುವ ತರಕಾರಿ ವ್ಯಾಪಾರವನ್ನು ಅವಲಂಬಿಸಿ ಜೀವನ ಸಾಗಿಸುತ್ತಿವೆ ಎಂದು ತಿಳಿಸಿದ ಅವರು, ರಾಯಚೂರು ನಗರವು ಪ್ರಮುಖ ವ್ಯಾಪಾರ ಕೇಂದ್ರವಾಗಿರುವುದರಿಂದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಾಲ್ಕು ಕಡೆ ಶಾಶ್ವತ ತರಕಾರಿ ಮಾರುಕಟ್ಟೆಗಳನ್ನು ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಅಲ್ಲದೆ, ನಗರದ ಸರ್ವೇ ನಂ.1211ರಲ್ಲಿ ಇರುವ ಕೊಳಗೇರಿ ಅಭಿವೃದ್ಧಿ ನಿಗಮದ ಸರ್ಕಾರಿ ಜಾಗ ಅಥವಾ ನಗರ ವ್ಯಾಪ್ತಿಯ ಸೂಕ್ತ ಸರ್ಕಾರಿ ಭೂಮಿಯನ್ನು ತರಕಾರಿ ವ್ಯಾಪಾರಕ್ಕೆ ಮೀಸಲಿಡಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

ಈ ಸಂದರ್ಭದಲ್ಲಿ ಮೊಹಮ್ಮದ್ ವಾಸಿಂ, ಡಿ.ಆರ್.ಎಂ ಜಾನಕಿರಾಮ್, ರಘುಬಾಬು, ಉಮೇಶ್ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳ ವಿಲೀನ ವಿರೋಧಿಸಿ ಎಐಡಿಎಸ್‌ಒ ಪ್ರತಿಭಟನೆ

ಸರ್ಕಾರಿ ಶಾಲೆಗಳನ್ನು ಉಳಿಸುವ ಹೋರಾಟಕ್ಕೆ ಸಾಹಿತಿಗಳು, ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರು ಬೆಂಬಲ ವ್ಯಕ್ತಪಡಿಸಿದ್ದು, ಶಾಲೆಗಳ ವಿಲೀನ ಪ್ರಕ್ರಿಯೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಚನ್ನಬಸ ಜಾನೇಕಲ್, ಮಹೇಶ್, ಸೂರ್ಯನಾರಾಯಣ, ಶಿವಪ್ಪ, ರವಿಕುಮಾರ್, ಬಸವರಾಜ್ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಜೂ.20ರಂದು ಜಿಲ್ಲಾ ಪ್ರಥಮ ಕದಳಿ ಮಹಿಳಾ ಸಮ್ಮೇಳನ

ಕೂಡಲೇ ಕೈಬಿಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಚನ್ನಬಸ ಜಾನೇಕಲ್, ಮಹೇಶ್, ಸೂರ್ಯನಾರಾಯಣ, ಶಿವಪ್ಪ, ರವಿಕುಮಾರ್, ಬಸವರಾಜ್ ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು, ಪೋಷಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

03 ಕುರಿ ಕಳ್ಳರ ಬಂಧನ: ₹1.20 ಲಕ್ಷ ನಗದು, 04 ಕುರಿಮರಿಗಳು ಹಾಗೂ ಬೈಕ್ ಜಪ್ತಿ

ಎಂದು ಪೊಲೀಸರು ತಿಳಿಸಿದ್ದಾರೆ.


ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

ಸೊಳ್ಳೆ ಗಾತ್ರ ಡ್ರೋನ್ ಅಭಿವೃದ್ಧಿಪಡಿಸಿದ ಚೀನಾ

ಬೀಜಿಂಗ್, ಜೂ.17-

ತಂತ್ರಜ್ಞಾನದಲ್ಲಿ ಭಾರಿ ಮುನ್ನಡೆಯಲ್ಲಿರುವ ಚೀನಾ ಇದೀಗ ಸೊಳ್ಳೆ ಗಾತ್ರದ ಡ್ರೋನ್ ಉತ್ಪಾದಿಸಿ ವಿಶ್ವದ ಗಮನ ಸೆಳೆದಿದೆ.ಚೀನಾದ ಹುನಾನ್ ಪ್ರಾಂತ್ಯದ ರಾಷ್ಟ್ರೀಯ ರಕ್ಷಣಾ ತಂತ್ರಜ್ಞಾನ ವಿಶ್ವವಿದ್ಯಾಲಯದ ರೊಬೊಟಿಕ್ಸ್ ಪ್ರಯೋಗಾಲಯ ರಹಸ್ಯ ಮಿಲಿಟರಿ ಕಾರ್ಯಾಚರಣೆಗಳಿಗಾಗಿ ಸೊಳ್ಳೆ ಗಾತ್ರದ ಡ್ರೋನ್ ಅಭಿವೃದ್ಧಿಪಡಿಸಿದೆ.

ಚೀನಾ ಅಭಿವೃದ್ಧಿಪಡಿಸಿದ ಮೈಕ್ರೋ-ಡ್ರೋನ್ ಗಾತ್ರ ಮತ್ತು ವಿನ್ಯಾಸ ಎರಡರಲ್ಲೂ ಸೊಳ್ಳೆಯನ್ನು ಹೋಲುತ್ತದೆ. ಇದು ಎರಡು ಸಣ್ಣ ಎಲೆ ಆಕಾರದ ರೆಕ್ಕೆಗಳು ಮತ್ತು ಮೂರು ಕೂದಲು ಗಾತ್ರದ ತೆಳುವಾದ ಕಾಲುಗಳನ್ನು ಹೊಂದಿದೆ. ಕೋಲು ಆಕಾರದ ದೇಹವನ್ನು ಹೊಂದಿದೆ.



ಈ ಡ್ರೋನ್‌ನ್ನು ಸ್ಮಾರ್ಟ್‌ಫೋನ್ ಬಳಸಿ ನಿಯಂತ್ರಿಸಬಹುದು. ಡ್ರೋನ್ ತುಂಬಾ ಚಿಕ್ಕದಾಗಿದ್ದು ಅದನ್ನು ಎರಡು ಬೆರಳುಗಳ ನಡುವೆ ಹಿಡಿದಿಟ್ಟುಕೊಳ್ಳಬಹುದಾಗಿದೆ ಎಂದು ಸೌತ್ ಚೀನಾ ಮಾರ್ನಿಂಗ್ ವರದಿ ಮಾಡಿದೆ.

ಸೊಳ್ಳೆಯಂತಹ ರೋಬೋಟ್ ಯುದ್ಧಭೂಮಿಯಲ್ಲಿ ಮಾಹಿತಿ ಕಲೆಹಾಕಲು ಮತ್ತು ವಿಶೇಷ ಕಾರ್ಯಾಚರಣೆಗಳಿಗಾಗಿ ವಿನ್ಯಾಸಗೊಳಿಸಲಾಗಿದೆ. ಇದರ ಸಣ್ಣ ಗಾತ್ರದಿಂದ ಅದೊಂದು ಡ್ರೋನ್ ಎಂದು ಊಹಿಸಲು ಕಷ್ಟಸಾಧ್ಯ. ಈ ಪುಟ್ಟ ಡ್ರೋನ್ ದೊಡ್ಡ ಡ್ರೋನ್‌ಗಳನ್ನು ಸುಲಭವಾಗಿ ಪತ್ತೆಹಚ್ಚುತ್ತದೆ. ಅಲ್ಲದೇ ಸೂಕ್ಷ್ಮ ಪ್ರದೇಶಗಳಲ್ಲಿ ರಹಸ್ಯ ಕಣ್ಗಾವಲು ಮತ್ತು ಗುಪ್ತಚರ ಮಾಹಿತಿ ಕಲೆಹಾಕಲು ಸಹಕಾರಿಯಾಗಿದೆ ಎಂದು ವಿದ್ಯಾರ್ಥಿ ಲಿಯಾಂಗ್ ಹೆಕ್ಸಿ ಯಾಂಗ್ ಹೇಳಿಕೊಂಡಿದ್ದಾನೆ.

ಈ ಡ್ರೋನ್ ಏಕೆ ಮಹತ್ವದ್ದಾಗಿದೆ?ಇಷ್ಟು ಸಣ್ಣ ಪ್ರಮಾಣದಲ್ಲಿ ಡ್ರೋನ್ ಅನ್ನು ಅಭಿವೃದ್ಧಿಪಡಿಸುವುದು ಎಂಜಿನಿಯರ್‌ಗಳಿಗೆ ಭಾರೀ ಸವಾಲುಗಳನ್ನು ಒಡ್ಡುತ್ತದೆ. ಸಂವೇದಕಗಳು, ಬ್ಯಾಟರಿಗಳು, ನಿಯಂತ್ರಣ ಸರ್ಕ್ಯೂಟ್‌ಗಳು ಮತ್ತು ಸಂವಹನ ವ್ಯವಸ್ಥೆಗಳಂತಹ ಅಗತ್ಯ ಘಟಕಗಳು ಅತ್ಯಂತ ಸೀಮಿತ ಜಾಗದಲ್ಲಿ ಹೊಂದಿಕೊಳ್ಳಬೇಕಾಗುತ್ತದೆ. ಹಾರಾಟದ ಸ್ಥಿರತೆ ಮತ್ತು ನಿಯಂತ್ರಣವನ್ನು ಕಾಯ್ದುಕೊಳ್ಳುವಾಗ ಕೀಟಗಳಂತಹ ಚಲನೆಯನ್ನು ಅದಕ್ಕೆ ಒದಗಿಸಲು ಮೈಕ್ರೋ-ಎಂಜಿನಿಯರಿಂಗ್, ಮೆಟೀರಿಯಲ್ ಸೈನ್ಸ್ ಮತ್ತು ಬಯೋನಿಕ್ಸ್ ಸೇರಿದಂತೆ ಬಹು ವಿಭಾಗಗಳ ಪರಿಣತಿ ಅಗತ್ಯವಿದೆ.

ಸೊಳ್ಳೆ ಗಾತ್ರದ ಡ್ರೋನ್ ಅಭಿವೃದ್ಧಿಯಲ್ಲಿ ಚೀನಾ ಮಾತ್ರ ಮುಂದಿಲ್ಲ. ಅಮೆರಿಕದ ಟೆಲಿಡೈನ್ ಡಿಫೆನ್ಸ್ ಸಹ ಬ್ಲ್ಯಾಕ್ ಹಾರ್ನೆಟ್ 4 ಎಂಬ ಪುಟ್ಟ ಡ್ರೋನ್ ಅಭಿವೃದ್ಧಿ ಪಡಿಸಿದೆ. ಈ ಡ್ರೋನ್ ನೇರ ದೃಶ್ಯಗಳು ಮತ್ತು ಡೇಟಾವನ್ನು ಸಶಸ್ತ್ರ ಪಡೆಗಳಿಗೆ ರವಾನಿಸುತ್ತದೆ. ಬ್ಲ್ಯಾಕ್ ಹಾರ್ನೆಟ್ 4 ಅಮೆರಿಕದ ಸೇನೆಯಲ್ಲಿ ಬಳಕೆಯಲ್ಲಿದೆ.

ಹಾರ್ವರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ರೋಬೋ ಬೀ ಎಂಬ ರೋಬೋಟ್ ಅಭಿವೃದ್ಧಿಪಡಿಸುತ್ತಿದ್ದಾರೆ. ಇದು ಕೀಟದಂತೆ ಕಾಣುವ ಮೈಕ್ರೋ ರೋಬೋಟ್ ಆಗಿದೆ. ಇವು ನೀರಿನ ಆಳದಲ್ಲಿ ಈಜುತ್ತವೆ. ಅಲ್ಲದೇ ಕೀಟಗಳಂತೆ ಹಾರುವ ಸಾಮರ್ಥ್ಯ ಹೊಂದಿವೆ.ಮಿಲಿಟರಿ ಕೃಷಿಗಾಗಿ ಮೈಕ್ರೋ ರೋಬೋಟಿಕ್ಸ್ ಚೀನಾದ ಸೊಳ್ಳೆ ಗಾತ್ರದ ಡ್ರೋನ್ ಸೇನೆಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸಿದೆ.

ಉದ್ದೇಶಿತ ಔಷಧ ವಿತರಣೆ, ಸಣ್ಣ ಶಸ್ತ್ರಚಿಕಿತ್ಸೆ , ರೋಗನಿರ್ಣಯ ಮತ್ತು ವೈದ್ಯಕೀಯ ಉಪಯೋಗಕ್ಕಾಗಿ ಪುಟ್ಟ ರೋಬೋಟ್‌ಗಳನ್ನು ಅನ್ವೇಷಿಸುತ್ತಿದ್ದಾರೆ. ಪರಿಸರ ಮೇಲ್ವಿಚಾರಣೆ ಮತ್ತು ಕೃಷಿ ಸಂಶೋಧನೆಗೂ ಈ ತಂತ್ರಜ್ಞಾನ ಬಳಕೆಗೆ ಚೀನಾ ಮುಂದಾಗಿದೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ; ಮತಗಟ್ಟೆ ಅಧಿಕಾರಿಗಳಿಗೆ ತರಬೇತಿ ಕಾರ್ಯಾಗಾರ

ಪ್ರತಿಯೊಬ್ಬ ಅರ್ಹರಿಗೂ ಸಿಗಲಿ ಮತದಾನದ ಹಕ್ಕು: ಜವಾಬ್ದಾರಿಯುತ ಕಾರ್ಯಕ್ಕೆ ಡಿಸಿ ನಾಗೇಂದ್ರ ಪ್ರಸಾದ್.ಕೆ ಕರೆ



ಬಳ್ಳಾರಿ,ಜೂ.17-

ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಅತ್ಯಂತ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಸೂಚಿಸಿದರು.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅಂಗವಾಗಿ, 94-ಬಳ್ಳಾರಿ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮತಗಟ್ಟೆ ಅಧಿಕಾರಿಗಳು, ಮತಗಟ್ಟೆ ಮೇಲ್ವಿಚಾರಕರು ಹಾಗೂ ನೋಡಲ್ ಅಧಿಕಾರಿಗಳಿಗೆ ನಗರದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಮಂಗಳವಾರ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಈ ವಿಶೇಷ ತೀವ್ರ ಪರಿಷ್ಕರಣೆಯ ಮುಖ್ಯ ಉದ್ದೇಶ ಕೇವಲ ಹೆಸರುಗಳನ್ನು ತೆಗೆದುಹಾಕುವುದು ಅಲ್ಲ, ಬದಲಿಗೆ ಅರ್ಹರನ್ನು ಸೇರ್ಪಡೆಗೊಳಿಸುವುದು ಮತ್ತು ದೋಷಮುಕ್ತ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಾಗಿದೆ ಎಂದು ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆಯನ್ನು ಅತ್ಯಂತ ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ನಡೆಸಲು ಚುನಾವಣಾ ಆಯೋಗವು ವಿಧಿ-ವಿಧಾನಗಳನ್ನು ರೂಪಿಸಿದೆ. ಮನೆ-ಮನೆ ಸಮೀಕ್ಷೆ ಮತ್ತು ಗಣತಿ ಪ್ರಕ್ರಿಯೆಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮತ್ತು ವಿವಿಧ ರಾಜಕೀಯ ಪಕ್ಷಗಳು ನೇಮಿಸಿರುವ ಬೂತ್ ಮಟ್ಟದ ಏಜೆಂಟರು ಮನೆ-ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುತ್ತಾರೆ. ಮತದಾರರಿಗೆ ಗಣತಿ ನಮೂನೆಯನ್ನು ನೀಡಲಾಗುತ್ತದೆ. ಇದರಲ್ಲಿ ಎರಡು ಪ್ರತಿಗಳಿರುತ್ತವೆ.ಒಂದನ್ನು ಮತದಾರರು ತಮ್ಮ ಬಳಿ ಇಟ್ಟುಕೊಳ್ಳಬೇಕು, ಮತ್ತೊಂದನ್ನು ಅಧಿಕಾರಿಗಳಿಗೆ ನೀಡಬೇಕು ಎಂದರು.

ಮತದಾನ ಪ್ರಕ್ರಿಯೆ ಮತ್ತು ಮತದಾರರ ಪಟ್ಟಿ ಪರಿಷ್ಕರಣೆಯನ್ನು ಮತ್ತಷ್ಟು ಪಾರದರ್ಶಕ ಹಾಗೂ ಸುಲಭಗೊಳಿಸಲು ತರಲಾಗಿರುವ ಎಸ್‌ಐಆರ್ ತಂತ್ರಾಂಶ/ವ್ಯವಸ್ಥೆಯ ಕುರಿತು ಸವಿಸ್ತಾರವಾದ ಮಾಹಿತಿ ಹೊಂದಬೇಕು. ಈ ವ್ಯವಸ್ಥೆಯನ್ನು ಕ್ಷೇತ್ರ ಮಟ್ಟದಲ್ಲಿ ಹೇಗೆ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಮತ್ತು ತಾಂತ್ರಿಕ ಸವಾಲುಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಅಧಿಕಾರಿಗಳು ಮನವರಿಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಈ ಪ್ರಕ್ರಿಯೆಯಲ್ಲಿ ಯಾವುದೇ ಆಕ್ಷೇಪಣೆಗಳು ಅಥವಾ ದೂರುಗಳಿದ್ದಲ್ಲಿ, ಜಿಲ್ಲಾಧಿಕಾರಿಗಳು ಅಂತಿಮ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ಅವರು ತಿಳಿಸಿದರು.

ತರಬೇತಿ ನಡೆಯುತ್ತಿದ್ದ ಎಲ್ಲಾ ಕೊಠಡಿಗಳಿಗೂ ಖುದ್ದಾಗಿ ಭೇಟಿ ನೀಡಿದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು, ಅಧಿಕಾರಿಗಳಿಗೆ ಅಗತ್ಯ ಸಲಹೆ-ಸೂಚನೆಗಳನ್ನು ನೀಡಿದರು.

ಮತಗಟ್ಟೆ ಅಧಿಕಾರಿಗಳ ಕರ್ತವ್ಯಗಳು, ತಪ್ಪುಗಳಿಲ್ಲದ ಮತದಾರರ ಪಟ್ಟಿ ಸಿದ್ಧಪಡಿಸುವುದು ಮತ್ತು ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡುವುದು ಸೇರಿದಂತೆ ಪರಿಷ್ಕರಣಾ ಪ್ರಕ್ರಿಯೆಯ ವಿವಿಧ ಹಂತಗಳ ಬಗ್ಗೆ ತರಬೇತಿಯಲ್ಲಿ ಸಂಪೂರ್ಣವಾಗಿ ವಿವರಿಸಲಾಯಿತು.

ಈ ಸಂದರ್ಭದಲ್ಲಿ 94-ಬಳ್ಳಾರಿ ನಗರ ಕ್ಷೇತ್ರ ನೋಂದಣಾಧಿಕಾರಿ ಆದ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಪಾಲಿಕೆಯ ಉಪ-ಆಯುಕ್ತ ನಂದೀಶ್ ಸೇರಿದಂತೆ ಜಿಲ್ಲಾ ಮಟ್ಟದ ಮತ್ತು ಚುನಾವಣಾ ಶಾಖೆಯ ಅಧಿಕಾರಿಗಳು ಸೇರಿದಂತೆ ಕ್ಷೇತ್ರ ಮಟ್ಟದ ಅಧಿಕಾರಿಗಳು ಈ ತರಬೇತಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮಾಹಿತಿ ಪಡೆದುಕೊಂಡರು.

ಜಿಲ್ಲೆಯ ಆದರ್ಶ ವಿದ್ಯಾಲಯಗಳಲ್ಲಿನ ಖಾಲಿ ಸೀಟುಗಳ ಪ್ರವೇಶ ಪರೀಕ್ಷೆಗೆಅರ್ಜಿ ಆಹ್ವಾನ

ಕೊಪ್ಪಳ,ಜೂ.17-

ಕೊಪ್ಪಳ ಜಿಲ್ಲೆಯ ಆದರ್ಶ ವಿದ್ಯಾಲಯಗಳಲ್ಲಿ 2026-27ನೇ ಸಾಲಿನಲ್ಲಿ ಖಾಲಿ ಇರುವ 7, 8 ಮತ್ತು 9ನೇ ತರಗತಿಗಳ ಸೀಟುಗಳಿಗೆ ಪ್ರವೇಶ ಪರೀಕ್ಷೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜೂನ್ 22 ಕೊನೆಯ ದಿನವಾಗಿದ್ದು, ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ಜೂ. 28ರ ಭಾನುವಾರ ನಡೆಯಲಿದೆ. ಅರ್ಜಿಗಳನ್ನು ಕೊಪ್ಪಳ ಜಿಲ್ಲೆಯ ಕನಕಗಿರಿ, ಟಣಕನಕಲ್, ತಳವಗೇರಾ ಮತ್ತು ಇಟಗಿಯಲ್ಲಿರುವ ಆದರ್ಶ ವಿದ್ಯಾಲಯಗಳಲ್ಲಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರನ್ನು ಕನಕಗಿರಿಯ ಸುರೇಶ್ ಮೊ.ಸಂ: 9632737675, 8867273046, ಟಣಕನಕಲ್ ಪ್ರಕಾಶ್ ತಗಡಿನಮನಿ ಮೊ.ಸಂ: 901130717, 9916703201, ತಳವಗೇರಾ ಸಂಗಪ್ಪ ಕಿರಸೂರು ಮೊ.ಸಂ: 9008976878, 8105747111, ಇಟಗಿ ಶ್ರೀರಾಮರಡ್ಡಿ ಮೊ.ಸಂ: 9945420957, 8494858187, ಇವರನ್ನು ಸಂಪರ್ಕಿಸುವುದು ಎಂದು ಟಿ.ಬಿ.ಪಿ ಮುನಿರಾಬಾದ್‌ನ ಕೊಪ್ಪಳ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.30 ರಂದು ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷಯು.ನಿಸಾರ್ ಅಹಮದ್ ಬಳ್ಳಾರಿಗೆ

ಬಳ್ಳಾರಿ,ಜೂ.17-

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್ ಅವರು, ಜೂನ್ 30 ರಂದು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ಜೂ.30 ರಂದು ಬೆಳಿಗ್ಗೆ 10.30 ಗಂಟೆಗೆ ಬಳ್ಳಾರಿ ನಗರದ ಹಿಂದುಳಿದ ಹಾಗೂ ಕೊಳಚೆ ಪ್ರದೇಶಗಳಲ್ಲಿರುವ ಅಂಗನವಾಡಿ ಮತ್ತು ಉರ್ದು ಶಾಲೆಗಳಿಗೆ ಅಧ್ಯಕ್ಷರು ಭೇಟಿ ನೀಡಿ ಪರಿಶೀಲಿಸುವರು.

ಬಳಿಕ ಮಧ್ಯಾಹ್ನ 12 ಗಂಟೆಗೆ ಬಳ್ಳಾರಿ ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಅಲ್ಪಸಂಖ್ಯಾತರ ಕುಂದು ಕೊರತೆಗಳ ವಿಚಾರಣಾ ಸಭೆ ನಡೆಸುವರು.

ನಂತರ ಮಧ್ಯಾಹ್ನ 03 ಗಂಟೆಗೆ ಬಳ್ಳಾರಿಯ ಅನಂತಪುರ ರಸ್ತೆಯಲ್ಲಿರುವ ನೂತನ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಪ್ರಗತಿ ಪರಿಶೀಲನಾ ಸಭೆ ನಡೆಸುವರು ಎಂದು ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ತಿಳಿಸಿದ್ದಾರೆ.

ಕೃಷಿ ಇಲಾಖೆಯ ಯೋಜನೆಗಳ ಸದುಪಯೋಗ ಪಡೆದುಕೊಳ್ಳಿ: ಸುನೀಲ್ ದೊಡ್ಡಮನಿ

ಆತ್ಮನಿರ್ಭರ ಪಲ್ಸ್ ಅಭಿಯಾನದಡಿ ರೈತರಿಗೆ ಉಚಿತ ತೊಗರಿ ಮಿನಿಕಿಟ್ ಬೀಜ



ಚಿತ್ತಾಪುರ,ಜೂ.17-

ತಾಲೂಕಿನ ರೈತರು ಕೃಷಿ ಇಲಾಖೆಯ ವಿವಿಧ ಯೋಜನೆಗಳ ಸದುಪಯೋಗ ಪಡೆದುಕೊಂಡು ಕೃಷಿ ಅಭಿವೃದ್ಧಿಯತ್ತ ಹೆಜ್ಜೆ ಇಡಬೇಕು ಎಂದು ರಾಜ್ಯ ಅಪೆಕ್ಸ್ ಬ್ಯಾಂಕ್‌ನ ನಿರ್ದೇಶಕ ಸುನೀಲ್ ದೊಡ್ಡಮನಿ ಕರೆ ನೀಡಿದರು.

ತಾಲೂಕಿನ ಗುಂಡಗುರ್ತಿ ಹೋಬಳಿಯ ಗುಂಡಗುರ್ತಿ ಗ್ರಾಮದಲ್ಲಿ ಕೃಷಿ ಇಲಾಖೆ ವತಿಯಿಂದ 2026-27ನೇ ಸಾಲಿನ ದ್ವಿದಳ ಧಾನ್ಯಗಳ ಆತ್ಮನಿರ್ಭರ ಪಲ್ಸ್ ಅಭಿಯಾನ ಯೋಜನೆಯಡಿ ಆಯೋಜಿಸಿದ್ದ ಉಚಿತ ತೊಗರಿ ಮಿನಿಕಿಟ್ ಬಿತ್ತನೆ ಬೀಜ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ರೈತರ ಕಲ್ಯಾಣಕ್ಕಾಗಿ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಪ್ರಯೋಜನ ಪಡೆದು ಉತ್ಪಾದನೆ ಹೆಚ್ಚಿಸಿಕೊಳ್ಳುವ ಮೂಲಕ ರೈತರು ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಲಹೆ ನೀಡಿದರು.

ಸಹಾಯಕ ಕೃಷಿ ನಿರ್ದೇಶಕ ಸಂಜೀವಕುಮಾರ ಮಾನಕರ್ ಮಾತನಾಡಿ, ದ್ವಿದಳ ಧಾನ್ಯಗಳ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಿ ರಾಜ್ಯವನ್ನು ಈ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿ ಮಾಡುವ ಉದ್ದೇಶದಿಂದ ಆತ್ಮನಿರ್ಭರ ಪಲ್ಸ್ ಅಭಿಯಾನ ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ರೈತರು ಉಚಿತವಾಗಿ ನೀಡಲಾಗುತ್ತಿರುವ ಗುಣಮಟ್ಟದ ತೊಗರಿ ಬೀಜಗಳನ್ನು ಬಳಸಿಕೊಂಡು ಹೆಚ್ಚಿನ ಇಳುವರಿ ಪಡೆಯಬೇಕು ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಬಸವರಾಜ ಹೊಸಳ್ಳಿ, ಮಲ್ಲಿಕಾರ್ಜುನ, ಶ್ರೀನಿವಾಸ ನೆನಕ್ಕಿ, ಸುನೀಲ್ ಅಮ್ಮಗೋಳ, ಯೋಜನೆಯ ತಾಲೂಕು ನೋಡಲ್ ಆಧಿಕಾರಿ ಜುಲೈಕರ್ ಅಹ್ಮದ್, ಕೃಷಿ ಅಧಿಕಾರಿಗಳಾದ ಅಬ್ದುಲ್ ಕರೀಂ, ಸುರೇಖಾ, ವಿಶ್ವರಾಧ್ಯ, ಕಲ್ಯಾಣಿ, ವಿರುಪಾಕ್ಷಿ, ಬಸವರಾಜ, ಶರಣಮ್ಮ, ಕನ್ಯಾಕುಮಾರಿ, ಲಕ್ಷ್ಮಿ ಸೇರಿದಂತೆ ಅನೇಕ ಮುಖಂಡರು ಹಾಗೂ ರೈತರು ಇದ್ದರು.

ಬಸವಣ್ಣನ ಹೆಸರಲ್ಲಿ ಸಮಾಜದಲ್ಲಿ ಒಡಕು ಮೂಡಿಸುವುದು ಸರಿಯಲ್ಲ: ರಂಭಾಪುರಿ ಜಗದ್ಗುರು



ಬಸವಕಲ್ಯಾಣ,ಜೂ.17-

ಬಸವಣ್ಣನವರ ಹೆಸರಿನಲ್ಲಿ ಹಿಂದೂ ಧರ್ಮದ ಸಂಸ್ಕೃತಿಗೆ ಚ್ಯುತಿ ತರುವ ಹಾಗೂ ಸಮಾಜದಲ್ಲಿ ವೈಮನಸ್ಸು ಮೂಡಿಸುವ ಪ್ರಯತ್ನ ಗಳ ನ್ನು ಒಪ್ಪಲಾಗುವುದಿಲ್ಲ ಎಂದು ರಂಭಾಪುರಿ ಜಗದ್ಗುರು ಹೇಳಿದ್ದಾರೆ.

ತಡೋಳಾ ಆಶ್ರಮದಲ್ಲಿ ಮಂಗಳವಾರ ಬಸವಾದಿ ಶಿವಶರಣರ ಹಿಂದೂ ಸಮಾವೇಶದ ಕುರಿತು ನಡೆದ ಸಭೆಯಲ್ಲಿ ಮಾತನಾಡಿದ ಅವರು, ಬಸವಣ್ಣನವರ ಹೆಸರಿನಲ್ಲಿ ಕೆಲ ಮಠಾಧೀಶರು ಸಮಾಜದಲ್ಲಿ ಒಡಕು ಮತ್ತು ಭಿನ್ನಾಭಿಪ್ರಾಯಗಳನ್ನು ಹುಟ್ಟುಹಾಕುವ ಕೆಲಸ ಮಾಡುತ್ತಿರುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟರು.

ಬಸವಣ್ಣನವರು ಜಾತಿ ಭೇದವಿಲ್ಲದೆ ಎಲ್ಲರೂ ನನ್ನವರೇ ಎಂಬ ಸಮಾನತೆಯ ಸಂದೇಶ ಸಾರಿದ್ದರು. ವೈಯಕ್ತಿಕ ಹಿತಾಸಕ್ತಿಗಾಗಿ ಸಮಾಜ ಮತ್ತು ಸಂಸ್ಕೃತಿಯನ್ನು ವಿಭಜಿಸುವುದು ಸರಿಯಲ್ಲ ಎಂದು ಹೇಳಿದರು.

ಕನ್ನೇರಿ ಶ್ರೀಗಳ ಮಾತುಗಳು ಕಠೋರವಾಗಿರಬಹುದು. ಆದರೆ ಆ ಮಾತುಗಳ ಹಿಂದೆ ನೋವು ಅಡಗಿರುವುದು ಕಂಡುಬರುತ್ತದೆ. ಜೂನ್ 28ರಂದು ನಡೆಯಲಿರುವ ಸಮಾವೇಶದಲ್ಲಿ ವೈಯಕ್ತಿಕ ಟೀಕೆ-ಟಿಪ್ಪಣಿಗಳನ್ನು ತಪ್ಪಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವ ಮಠಾಧೀಶರೂ ಹಠ ಸಾಧಿಸುವುದು ಒಳ್ಳೆಯದಲ್ಲ. ಪರಸ್ಪರ ಹಠ ಮತ್ತು ಭಿನ್ನಾಭಿಪ್ರಾಯಗಳು ಸಮಾಜದಲ್ಲಿ ಸಂಘರ್ಷಕ್ಕೆ ಕಾರಣವಾಗಬಹುದು. ಉಭಯ ಬಣದ ಶ್ರೀಗಳು ಸಮಾಜದ ಹಿತದೃಷ್ಟಿಯಿಂದ ಸಮಾನತೆ ಮತ್ತು ಸಾಮರಸ್ಯದ ಸಂದೇಶ ಸಾರಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ಅಖಿಲ ಭಾರತ ವೀರಶೈವ ಮಹಾಸಭೆಯ ರಾಷ್ಟ್ರೀಯ ಅಧ್ಯಕ್ಷ ಈಶ್ವರ್ ಖಂಡ್ರೆ ಅವರಿಗೆ ಆಶೀರ್ವಾದ ನೀಡಿ, ಅವರು ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಆಗುವ ವಿಶ್ವಾಸವಿದೆ ಎಂದು ಹೇಳಿದರು.

ರಾಜೇಶ್ವರ್ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಮಠಾಧೀಶರ ಹೇಳಿಕೆಗಳಿಂದ ಸಮಾಜದಲ್ಲಿ ಒಡಕು ಮೂಡುತ್ತಿರುವುದು ಆತಂಕಕಾರಿ ಬೆಳವಣಿಗೆ. ಆದ್ದರಿಂದ ಬಸವಕಲ್ಯಾಣದಲ್ಲಿ ನಡೆಯುವ ಬಸವಾದಿ ಶಿವಶರಣರ ಹಿಂದೂ ಸಮಾವೇಶವನ್ನು ಸಾಮರಸ್ಯ ಮತ್ತು ಶಾಂತಿಯ ವಾತಾವರಣದಲ್ಲಿ ನಡೆಸಲು ಮಠಾಧೀಶರ ಒಕ್ಕೂಟ ನಿರ್ಧರಿಸಿದೆ ಎಂದು ತಿಳಿಸಿದರು.

ಸಚಿವ ಈಶ್ವರ್ ಖಂಡ್ರೆ ಮಾತನಾಡಿ, ಉಭಯ ಬಣದ ಶ್ರೀಗಳು ಪರಸ್ಪರ ಆರೋಪ-ಪ್ರತ್ಯಾರೋಪಗಳಲ್ಲಿ ತೊಡಗುವುದು ಸಮಾಜಕ್ಕೆ ಹಾನಿಕಾರಕ. ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವ ಯಾವುದೇ ಬೆಳವಣಿಗೆ ನಡೆಯಬಾರದು. ಪ್ರತಿಯೊಬ್ಬ ಮಠಾಧಿಪತಿಗೂ ತಮ್ಮ ತತ್ವ-ಸಿದ್ಧಾಂತಗಳನ್ನು ಪ್ರಚಾರ ಮಾಡುವ ಸಂವಿಧಾನಬದ್ಧ ಹಕ್ಕಿದೆ. ಎಲ್ಲ ಪೂಜ್ಯರ ಬಗ್ಗೆಯೂ ನನಗೆ ಗೌರವ ಮತ್ತು ಉತ್ತಮ ಅಭಿಪ್ರಾಯವಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಪ್ರಣವಾನಂದ್ ಸ್ವಾಮಿ, ಅಭಿನವ ಘನಲಿಂಗ್ ಸ್ವಾಮಿ, ರುದ್ರಮುನಿ ಶಿವಾಚಾರ್ಯ, ಸಿಂದನಕೇರಾದ ಶ್ರೀಗಳು, ಲೋಕೇಶ್ ಮಹಾರಾಜ್, ಶಾಂತವೀರ್ ಶಿವಾಚಾರ್ಯ ಪ್ರಮುಖರಾದ ಗುಂಡುರೆಡ್ಡಿ ಕಮಲಾಪುರೆ, ರವೀ ನಾವದ್ಗೆರ್, ಲೋಕೇಶ್ ಮೋಳಕೆರೆ ಸೇರಿದಂತೆ ಹಲವರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಆರೆಸ್ಸೆಸ್ ದೇಶದ ಕಾನೂನನ್ನು ಗೌರವಿಸಲಿ




ಆರೆಸ್ಸೆ ಸ್ ಮತ್ತು ಅದರ ಸೋದರ ಸಂಘಟನೆಗಳ ಸ್ವಯಂ ಸೇವೆಯ ಬಗ್ಗೆ ದೇಶಕ್ಕೆ ಬಹು ಹಿಂದಿನಿಂದಲೇ ಆಕ್ಷೇಪಗಳಿವೆ. ತನ್ನ ದೇಶ ವಿರೋಧಿ ಚಟುವಟಿಕೆಗಳ ಕಾರಣಕ್ಕಾಗಿ ಎರಡು ಬಾರಿ ಈ ಸಂಘಟನೆ ನಿಷೇಧಕ್ಕೊಳಗಾಗಿತ್ತು. ನಮ್ಮದು ಸಾಂಸ್ಕೃತಿಕ ಸಂಘಟನೆ ಎಂಬ ಸ್ಪಷ್ಟೀಕರಣದೊಂದಿಗೆ ಅದು ಮತ್ತೆ ಈ ದೇಶದಲ್ಲಿ ಕಾರ್ಯಾಚರಿಸತೊಡಗಿತು. ಇಂದು ಆರೆಸ್ಸೆ ಸ್ ಎನ್ನುವುದು ಅತಿ ದೊಡ್ಡ ಸರಕಾರೇತರ ಸಂಸ್ಥೆಯಾಗಿದ್ದು ಅತ್ಯಧಿಕ ವಿದೇಶಿ ದೇಣಿಗೆಯನ್ನು ಸ್ವೀಕರಿಸುತ್ತಿರುವ ಸಂಸ್ಥೆಗಳಲ್ಲಿ ಒಂದು ಎಂದು ಗುರುತಿಸಲ್ಪಡುತ್ತಿದೆ. ದೇಶಾದ್ಯಂತ ಸಾವಿರಾರು ಶಾಖೆಗಳಿರುವ, ಲಕ್ಷಾಂತರ ಕಾರ್ಯಕರ್ತರಿರುವ ಒಂದು ಸಂಘ ಅಧಿಕೃತವಾಗಿ ಯಾಕೆ ನೋಂದಣಿಯಾಗಿಲ್ಲ? ಎನ್ನುವ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಈ ಸಂಘದ ಮುಖ್ಯಸ್ಥರ ಬಳಿ ಸ್ಪಷ್ಟವಾದ ಉತ್ತರವೇ ಇಲ್ಲ. ಬದಲಿಗೆ ಪ್ರಶ್ನೆ ಕೇಳಿದವರ ಬಾಯಿಯನ್ನೇ ಮುಚ್ಚಿಸುವ ಪ್ರಯತ್ನವನ್ನು ಹಲವು ದಶಕಗಳಿಂದ ನಡೆಸುತ್ತಾ ಬರುತ್ತಿದ್ದಾರೆ. ಆರೆಸ್ಸೆ ಸ್ ಯಾಕೆ ನೋಂದಣಿಯಾಗಿಲ್ಲ? ಆರೆಸ್ಸೆ ಸ್‌ನ ಆದಾಯದ ಮೂಲ ಏನು? ಇದೀಗ ಈ ಪ್ರಶ್ನೆಗಳನ್ನು ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ನೇರವಾಗಿ ಸರಸಂಘ ಚಾಲಕ ಮೋಹನ್ ಭಾಗವತ್ ಅವರಿಗೆ ಪತ್ರದ ಮೂಲಕ ಕೇಳಿದ್ದಾರೆ. ಈ ಪ್ರಶ್ನೆಗೆ ಉತ್ತರಿಸಲಾಗದ ಭಾಗವತ್ ಹಿಂದೂ ಧರ್ಮ ಕೂಡ ನೋಂದಣಿಯಾಗಿಲ್ಲ ಎನ್ನುವ ಬೇಜವಾಬ್ದಾರಿ ಸಮಜಾಯಿಶಿಯನ್ನು ನೀಡಿದ್ದಾರೆ. ಹಾಗಾದರೆ ಆರೆಸ್ಸೆ ಸ್ ಎನ್ನುವುದು, ಹಿಂದೂ, ಕ್ರೈಸ್ತ, ಮುಸ್ಲಿಮ್ ಧರ್ಮಗಳಿರುವಂತೆ ಒಂದು ಧರ್ಮವೆ? ದೇಶದಲ್ಲಿರುವ ಎಲ್ಲ ಜಾತಿ, ಧರ್ಮದ ಸಂಘಟನೆಗಳೂ, ಸರಕಾರೇತರ ಸಂಸ್ಥೆಗಳು ಇದೇ ರೀತಿಯ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳಲು ಸಾಧ್ಯವೆ?

ಭಾರತದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸುಮಾರು 20,000ಕ್ಕೂ ಅಧಿಕ ಸರಕಾರೇತರ ಸಂಸ್ಥೆಗಳ ವಿದೇಶಿ ಧನ ಸಹಾಯ ಪಡೆಯುವ ಪರವಾನಿಗೆಯನ್ನು ರದ್ದುಗೊಳಿಸಲಾಗಿದೆ. ಇಂದು ಭಾರತದಲ್ಲಿ ಸಕ್ರಿಯವಾಗಿ ವಿದೇಶಿ ನಿಧಿ ಪಡೆಯಲು ಅರ್ಹತೆ ಹೊಂದಿರುವ ಎನ್‌ಜಿಒಗಳ ಸಂಖ್ಯೆ ಸುಮಾರು 16,000ಕ್ಕೆ ಇಳಿದಿದೆ ಎಂದು ಅಂಕಿಅಂಶಗಳು ಹೇಳುತ್ತವೆ. ತಮ್ಮ ವಾರ್ಷಿಕ ಆದಾಯ-ವೆಚ್ಚದ ಲೆಕ್ಕಪತ್ರಗಳನ್ನು ನಿಯಮಿತವಾಗಿ ಸಲ್ಲಿಸಿಲ್ಲ ಎನ್ನುವ ಕಾರಣಕ್ಕೆ ಸಾವಿರಾರು ಸರಕಾರೇತರ ಸಂಸ್ಥೆಗಳ ಪರವಾನಿಗೆ ರದ್ದಾಗಿದ್ದು ಇದರಿಂದಾಗಿ ಸಂಸ್ಥೆಯೇ ಮುಚ್ಚುವ ಸ್ಥಿತಿ ನಿರ್ಮಾಣವಾಗಿದೆ. ವಿದೇಶಿ ಹಣವನ್ನು ರಾಜಕೀಯಕ್ಕೆ, ಮತಾಂತರಕ್ಕೆ ಬಳಸಲಾಗುತ್ತಿದೆ ಎಂದು ಆರೋಪ ಮಾಡಿಯೂ ಹಲವು ಎನ್‌ಜಿಒಗಳನ್ನು ಮುಚ್ಚಲಾಗಿದೆ. ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಂಡ ಹಿನ್ನೆಲೆಯಲ್ಲಿ ಆ್ಯಮ್ನೆಸ್ಟಿ ಇಂಟರ್‌ನ್ಯಾಶನಲ್ 2020ರಲ್ಲಿ ಭಾರತದಲ್ಲಿ ತನ್ನ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿತು. ಆಕ್ಸ್ ಫಾಮ್ ಇಂಡಿಯಾ, ಗ್ರೀನ್‌ಪೀಸ್ ಇಂಡಿಯಾ, ಸೇವ್ ದಿ ಚಿಲ್ಡ್ರನ್ ಹೀಗೆ ಈ ದೇಶದ ಪರಿಸರ, ಮಾನವ ಹಕ್ಕುಗಳಿಗಾಗಿ, ಬಡಮಕ್ಕಳಿಗಾಗಿ ದುಡಿಯುತ್ತಿದ್ದ ಹಲವು ಸರಕಾರೇತರ ಸಂಸ್ಥೆಗಳನ್ನು ಕಾನೂನು ನಿಯಮಗಳನ್ನು ಮುಂದಿಟ್ಟು ಅವುಗಳು ಕಾರ್ಯಾಚರಣೆ ಮಾಡದಂತೆ ಸರಕಾರವೇ ತಡೆಯಿತು. ಇದರಿಂದಾಗಿ, ಸಾವಿರಾರು ಮಂದಿ ಉದ್ಯೋಗಗಳನ್ನು ಕಳೆದುಕೊಂಡದ್ದು ಮಾತ್ರವಲ್ಲ, ಈ ಸಂಸ್ಥೆಗಳಿಂದ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ವಲಯದಲ್ಲಿ ಪ್ರಯೋಜನಗಳನ್ನು ಪಡೆಯುತ್ತಿದ್ದ ಸಹಸ್ರಾರು ಮಂದಿ ವಂಚಿತರಾದರು. ಅಕ್ರಮ ವಿದೇಶಿ ಹಣ ವರ್ಗಾವಣೆಯ ಕುರಿತು ಕಾಳಜಿಯಿಟ್ಟು ಈ ಸಂಘಟನೆಗಳ ವಿರುದ್ಧ ಕ್ರಮ ತೆಗೆದುಕೊಂಡಿರುವುದೇ ಆಗಿದ್ದಲ್ಲಿ, ಈ ದೇಶದ ಅತಿ ದೊಡ್ಡ ಸರಕಾರೇತರ ಸಂಸ್ಥೆಯೊಂದು ಈವರೆಗೆ ನೋಂದಣಿಯನ್ನೂ ಮಾಡದೆ ಕೋಟ್ಯಂತರ ರೂ. ವಿದೇಶಿ ದೇಣಿಗೆಯನ್ನು ಗುರುದಕ್ಷಿಣೆ ರೂಪದಲ್ಲಿ ಪಡೆಯುತ್ತಾ ದೇಶಾದ್ಯಂತ ಕಾರ್ಯಾಚರಿಸುತ್ತಿರುವುದು ಯಾಕೆ ಕೇಂದ್ರ ಸರಕಾರದ ಗಮನಕ್ಕೆ ಬಂದಿಲ್ಲ? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

ರಾಜ್ಯದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರೆಸ್ಸೆ ಸ್ ಸಂಘಟನೆಯ ಸರಸಂಘಚಾಲಕರಿಗೆ ಬರೆದ ಪತ್ರದಲ್ಲಿ, ಎಲ್ಲೂ ಅವರ ಸಂಘದ ಸೇವೆಯನ್ನು ಅಥವಾ ಸಿದ್ಧಾಂತವನ್ನು ಟೀಕಿಸಿಲ್ಲ. ಬದಲಿಗೆ, ಈ ಭಾರತದ ಕಾನೂನಿಗೆ ಆರೆಸ್ಸೆ ಸ್ ಸಂಘಟನೆ ಯಾಕೆ ಬದ್ಧವಾಗಿಲ್ಲ ಎನ್ನುವ ಪ್ರಶ್ನೆಯನ್ನು ಅವರಿಗೆ ಕೇಳಿದ್ದಾರೆ. ಆರೆಸ್ಸೆ ಸ್‌ನ ಕಾನೂನು ಬದ್ಧ ಸ್ಥಿತಿಗತಿ ಮತ್ತು ಸಾಂಸ್ಥಿಕ ರಚನೆ ಏನು?, ಸಂಘಟನೆಯ ಅಧಿಕೃತ ಪದಾಧಿಕಾರಿಗಳು ಮತ್ತು ಪ್ರತಿನಿಧಿಗಳು ಯಾರು? ದೇಶ ವಿದೇಶಗಳಿಂದ ಬರುವ ಕೋಟ್ಯಂತರ ರೂ. ದೇಣಿಗೆ ಮತ್ತು ಆದಾಯದ ಮೂಲಗಳೇನು? ಸಂಘಟನೆಯ ಒಟ್ಟು ವೆಚ್ಚ ಹಾಗೂ ಆಸ್ತಿಗಳ ಸಂಪೂರ್ಣ ವಿವರಗಳೇನು? ಕಾನೂನಿನ ಪ್ರಕಾರ ಆರೆಸ್ಸೆ ಸ್ ತನಗೆ ಅನ್ವಯವಾಗುವ ತೆರಿಗೆಗಳನ್ನು ಪಾವತಿಸುತ್ತಿದೆಯೆ?ಯಾವುದೇ ಔಪಚಾರಿಕ ನೋಂದಣಿ ಇಲ್ಲದೆ ಇಷ್ಟೊಂದು ದೊಡ್ಡ ಮಟ್ಟದ ಚಟುವಟಿಕೆ ನಡೆಸಲು ಇರುವ ಕಾನೂನು ಅವಕಾಶಗಳು ಮತ್ತು ಆಧಾರವೇನು? ಅವರು ಕೇಳಿದ ಇಷ್ಟೂ ಪ್ರಶ್ನೆಗಳಲ್ಲಿ ವೈಯಕ್ತಿಕವಾದುದು ಯಾವುದೂ ಇಲ್ಲ. ತನ್ನನ್ನು ತಾನು ದೇಶಪ್ರೇಮಿ ಎಂದು ಹೇಳಿಕೊಳ್ಳುವ ಆರೆಸ್ಸೆ ಸ್, ತಾನು ನಿಜಕ್ಕೂ ಈ ದೇಶಕ್ಕೆ ಎಷ್ಟು ನಿಷ್ಠನಾಗಿದ್ದೇನೆ ಎನ್ನುವುದನ್ನು ಈ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಸಾಬೀತು ಪಡಿಸಬೇಕು. ಯಾಕೆಂದರೆ, ಅತ್ಯುತ್ತಮ ಭಾರತೀಯನಾಗಿರುವುದೆಂದರೆ, ಈ ದೇಶದ ಕಾನೂನಿಗೆ ಗೌರವ ನೀಡುವುದು. ತೆರಿಗೆ ವಂಚನೆ ಮಾಡದಿರುವುದು. ವಿದೇಶದಿಂದ ದೇಣಿಗೆ ಪಡೆದರೆ ಅದರ ಸಂಪೂರ್ಣ ಮಾಹಿತಿಯನ್ನು ಸರಕಾರಕ್ಕೆ ನೀಡುವುದು. ದೇಶದ ಕಾನೂನಿಗೇ ಗೌರವ ನೀಡದ, ಸಂಘಟನೆಯ ಹೆಸರಿನಲ್ಲಿ ಅಕ್ರಮ ಹಣ ವ್ಯವಹಾರ ನಡೆಸುತ್ತಾ ರಾಷ್ಟ್ರವನ್ನು ಕಟ್ಟುವುದು ಹೇಗೆ ಸಾಧ್ಯ? ವಿಪರ್ಯಾಸವೆಂದರೆ, ಆರೆಸ್ಸೆ ಸ್‌ನೊಳಗಿರುವ ಸಾವಿರಾರು ಕಾರ್ಯಕರ್ತರಿಗೇ ಆರೆಸ್ಸೆ ಸ್ ನೋಂದಣಿಯಾಗದ ಸಂಘಟನೆ ಎನ್ನುವುದು ಗೊತ್ತಿಲ್ಲದೇ ಇರುವುದು.

ಹಿಂದೂ ಧರ್ಮ ಮತ್ತು ಆರೆಸ್ಸೆ ಸ್ ಬೇರೆ ಬೇರೆ. ಹಿಂದೂ ಎನ್ನುವುದು ಧರ್ಮವಾದರೆ ಆರೆಸ್ಸೆ ಸ್ ಎನ್ನುವುದು ಕೆಲವು ಬ್ರಾಹ್ಮಣವಾದಿಗಳು ಸೇರಿ ಕಟ್ಟಿದ ಸಂಘಟನೆ. ಸರಕಾರದಿಂದ ದೇಣಿಗೆ ಸ್ವೀಕರಿಸುವ ಸಂಘಟನೆಗಳಷ್ಟೇ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ ಎಂದಾದರೆ ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರಕಾರ ನೂರಾರು ಸರಕಾರೇತರ ಸಂಘಟನೆಗಳ ನೋಂದಣಿಯನ್ನು ರದ್ದುಗೊಳಿಸಿರುವುದು ಯಾಕೆ? ಕಳೆದ ನೂರು ವರ್ಷಗಳಿಂದ ಆರೆಸ್ಸೆ ಸ್ ಕಾರ್ಯಾಚರಣೆ ನಡೆಸುತ್ತಿದೆ. ಇಷ್ಟರವರೆಗೆ ಯಾರೂ ಪ್ರಶ್ನಿಸಿಲ್ಲ. ಈಗ ಯಾಕೆ ಪ್ರಶ್ನಿಸುತ್ತಿದ್ದೀರಿ? ಎನ್ನುವ ಭಾಗವತರ ಪ್ರಶ್ನೆ ಅರ್ಥಪೂರ್ಣವಾಗಿದೆ. ಕಳೆದ 10 ವರ್ಷಗಳಲ್ಲಿ ಬೇರೆ ಬೇರೆ ನೆಪಗಳನ್ನು ಮುಂದಿಟ್ಟು ಮೋದಿ ನೇತೃತ್ವದ ಸರಕಾರಕ್ಕೆ ಅಧಿಕೃತವಾಗಿ ನೋಂದಣಿಯಾಗಿರುವ 20,000ಕ್ಕೂ ಅಧಿಕ ಎನ್‌ಜಿಒಗಳ ದೇಣಿಗೆ ಪರವಾನಿಗೆಯನ್ನು ರದ್ದುಗೊಳಿಸಲು ಸಾಧ್ಯವಾಯಿತಾದರೆ, ಕಾಂಗ್ರೆಸ್ ನೇತೃತ್ವದ ಸರಕಾರ ಈ ದೇಶವನ್ನು 70 ವರ್ಷಗಳ ಕಾಲ ಆಳ್ವಿಕೆ ಮಾಡಿದೆ. ಆ ಸಂದರ್ಭದಲ್ಲಿ ನೋಂದಣಿಯಾಗದೆ ಕಾರ್ಯಾಚರಿಸುತ್ತಿರುವ ಆರೆಸ್ಸೆ ಸ್‌ನ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಾಮರ್ಥ್ಯ ಕಾಂಗ್ರೆಸ್ ನಾಯಕರಿಗಿತ್ತು. ಆದರೆ ಅವರು ಅದರ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳದೇ ದೇಶಾದ್ಯಂತ ವಿಸ್ತರಿಸುವುದಕ್ಕೆ, ಕಾರ್ಯಾಚರಣೆ ನಡೆಸುವುದಕ್ಕೆ ಅವಕಾಶ ನೀಡಿದರು. 70 ವರ್ಷಗಳಲ್ಲಿ ಕಾಂಗ್ರೆಸ್ ಆರೆಸ್ಸೆ ಸ್‌ನ ವಿರುದ್ಧ ಈ ದೇಶದ ಕಾನೂನನ್ನು ಸರಿಯಾಗಿ ಬಳಸಿಕೊಂಡಿದ್ದರೆ, ಇಂದು ಆರೆಸ್ಸೆ ಸ್ ಇರುತ್ತಿರಲಿಲ್ಲ ಮಾತ್ರವಲ್ಲ, ಕಾಂಗ್ರೆಸ್‌ಗೆ ದೇಶದಲ್ಲಿ ಈ ಸ್ಥಿತಿ ನಿರ್ಮಾಣವಾಗುತ್ತಿರಲಿಲ್ಲ. ಆರೆಸ್ಸೆ ಸ್ ಈ ದೇಶದಲ್ಲಿ ಕಾನೂನಿನ ವ್ಯಾಪ್ತಿಯಿಂದ ನುಣುಚಿಕೊಂಡು ಕಾರ್ಯಾಚರಣೆ ನಡೆಸುವಲ್ಲಿ ಕಾಂಗ್ರೆಸ್‌ನ ಪಾತ್ರವೂ ದೊಡ್ಡದಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮರೆಯಬಾರದು.



ಆಪರೇಷನ್ ಬಿಜೆಪಿ ಟೈಗರ್ ಶಿವಸೇನೆ ಧ್ವಂಸಕ್ಕೆ ಕುತಂತ್ರ; ಮುಂದುವರೆದ ಕೇಸರಿ ಕೊಳಕಿನ ಇತಿಹಾಸ

ಮಹಾರಾಷ್ಟ್ರ ರಾಜಕಾರಣದಲ್ಲಿ ಮತ್ತೊಮ್ಮೆ ಭಾರೀ ರಾಜಕೀಯ ಕಂಪನ ಸಂಭವಿಸುವ ಸೂಚನೆಗಳಿವೆ. ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಪಕ್ಷವನ್ನು ಮತ್ತೊಮ್ಮೆ ಇಭ್ಭಾಗ ಮಾಡಲು ಬಿಜೆಪಿ ಬೃಹತ್ ಸಂಚು ರೂಪಿಸಿದೆ. ಆಪರೇಷನ್ ಟೈಗರ್ ಹೆಸರಿನಲ್ಲಿ ನಡೆಯುತ್ತಿರುವ ಈ ಹೊಸ ರಾಜಕೀಯ ಕುತಂತ್ರವು ಮುಂಬೈನಿಂದ ದೆಹಲಿಯವರೆಗೆ ಸಂಚಲನ ಸೃಷ್ಟಿಸಿದೆ. ಶಿವಸೇನೆ (ಯುಬಿಟಿ)ಯ 9 ಸಂಸದರ ಪೈಕಿ ಆರು ಸಂಸದರನ್ನು ಹೊತ್ತೊಯ್ದು, ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಬಣಕ್ಕೆ ಸೇರಿಸಲು ಬಿಜೆಪಿ ಯತ್ನಿಸುತ್ತಿದೆ ಎಂದು ಆರೋಪಗಳು ಚರ್ಚೆಯಲ್ಲಿವೆ.

ಈ ಚರ್ಚೆ ಮುನ್ನೆಲೆ ಬರುತ್ತಿದ್ದಂತೆಯೇ, ಶಿವಸೇನೆ (ಯುಬಿಟಿ) ಹಿರಿಯ ನಾಯಕ ಸಂಜಯ್ ರಾವತ್ ಅವರು ತೀವ್ರ ಆಕ್ರೋಶ ಹೊರಹಾಕಿದ್ದಾರೆ. ''ಪ್ರತಿಯೊಬ್ಬ ಸಂಸದನಿಗೆ 50 ಕೋಟಿ ರೂಪಾಯಿಗಳ ಆಮಿಷ ಒಡ್ಡಲಾಗಿದೆ. ಈಗಾಗಲೇ 15 ಕೋಟಿ ರೂಪಾಯಿಗಳ ಮುಂಗಡ ಹಣವನ್ನು ತಲುಪಿಸಲಾಗಿದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ, ಹಣಬಲ ಮತ್ತು ತಂತ್ರಗಾರಿಕೆಯ ಮೂಲಕ ವಿರೋಧ ಪಕ್ಷಗಳನ್ನು ನುಚ್ಚುನೂರು ಮಾಡಲು ಬಿಜೆಪಿ ಮತ್ತು ಅದರ ಮೈತ್ರಿಕೂಟ ನಿರಂತರವಾಗಿ ಯತ್ನಿಸುತ್ತಿದೆ'' ಎಂದು ಅವರು ಆರೋಪಿಸಿದ್ದಾರೆ. ಆದರೂ, ಮಹಾರಾಷ್ಟ್ರ ಬಿಜೆಪಿ ನಾಯಕರು ಈ ಆರೋಪಗಳನ್ನು ನಿರಾಕರಿಸಿದ್ದು, ಉದ್ಧವ್ ಠಾಕ್ರೆ ಅವರ ನಾಯಕತ್ವದ ಮೇಲಿನ ಅಸಮಾಧಾನದ ಕಾರಣಕ್ಕಾಗಿ ಅವರದೇ ನಾಯಕರು ಪಕ್ಷ ತೊರೆಯುತ್ತಿದ್ದಾರೆ ಸಮಜಾಯಿಷಿ ನೀಡುತ್ತಿದೆ.



ಮಹಾರಾಷ್ಟ್ರದ ರಾಜಕೀಯದಲ್ಲಿ ದಶಕಗಳಿಂದಲೂ ಇಂತಹ ಮೇಲಾಟ, ಸಖ್ಯತೆ ಹಾಗೂ ಹಠಾತ್ ಬದಲಾವಣೆಗಳು ನಡೆಯುತ್ತಲೇ ಇವೆ. ಅಂತೆಯೇ, ಕಳೆದ ಕೆಲವು ವರ್ಷಗಳಿಂದ ಮಹಾರಾಷ್ಟ್ರವು ಇಡೀ ದೇಶದಲ್ಲೇ ರಾಜಕೀಯ ವಿಧ್ವಂಸಕತೆಯ ಪ್ರಮುಖ ಪ್ರಯೋಗಶಾಲೆಯಾಗಿಯೂ ಮಾರ್ಪಟ್ಟಿದೆ.

ಕಳೆದ ದಶಕದಲ್ಲಿ, ಮಹಾರಾಷ್ಟ್ರದಲ್ಲಿ ಬಿಜೆಪಿ-ಶಿವಸೇನೆ ಮೈತ್ರಿಯಲ್ಲಿದ್ದವು. 2019ರಲ್ಲಿ ಉದ್ಧವ್ ಠಾಕ್ರೆಯವರು ಸೈದ್ಧಾಂತಿಕ ವಿರೋಧಿಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿಯೊಂದಿಗೆ ಮಹಾ ವಿಕಾಸ್ ಅಘಾಡಿ (ಎಂವಿಎ) ಸರ್ಕಾರ ರಚಿಸಿದಾಗ ಬಿಜೆಪಿ-ಶಿವಸೇನೆಯ ದೀರ್ಘಕಾಲದ ಮಿತ್ರತ್ವಕ್ಕೆ ಮುರಿದುಬಿದ್ದಿತು. ತದನಂತರ, ಆಪರೇಷನ್ ಕಮಲ ನಡೆಸಿದ ಬಿಜೆಪಿ, 2022ರಲ್ಲಿ ಏಕ್ನಾಥ್ ಶಿಂಧೆಯವರ ನೇತೃತ್ವದಲ್ಲಿ ಬಹುಸಂಖ್ಯೆಯ ಶಿವಸೇನಾ ಶಾಸಕರನ್ನು ಹೊತ್ತೊಯ್ದು, ಅವರೊಂದಿಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಿತು. ಇದು ಶಿವಸೇನೆಯನ್ನು ಎರಡು ಭಾಗಗಳಾಗಿ ಒಡೆಯಿತು. ಶಿಂಧೆಯವರ ಬಣದಲ್ಲಿ ಹೆಚ್ಚು ಶಾಸಕರಿದ್ದ ಕಾರಣ, ತಾವೇ ಮೂಲ ಪಕ್ಷವೆಂದು ಹೇಳಿಕೊಂಡಿತು. ಮೂಲ ಪಕ್ಷದ ಬಾವುಟ ಮತ್ತು ಚಿಹ್ನೆಯನ್ನು ತನ್ನ ವಶಕ್ಕೆ ಪಡೆಯಿತು. ಬಿಜೆಪಿಯ ಕೈಗೊಂಡೆಯಾಗಿರುವ ಚುನಾವಣಾ ಆಯೋಗ ಕೂಡ ಶಿಂಧೆ ಬಣವನ್ನೇ ಮೂಲ ಪಕ್ಷವೆಂದು ಅಧಿಕೃತವಾಗಿ ಗುರುತಿಸಿತು. ಉದ್ಧವ್ ಠಾಕ್ರೆಯವರ ಬಣವು ಶಿವಸೇನಾ (ಯುಬಿಟಿ) ಆಗಿ ಗುರುತಿಸಿಕೊಂಡಿತು.

2022ರ ಶಿವಸೇನೆಯನ್ನು ಒಡೆದ ಬೆನ್ನಲ್ಲೇ, 2023ರಲ್ಲಿ ಶರದ್ ಪವಾರ್ ಅವರ ಆಪ್ತ, ಸೋದರಸಂಬಂಧಿ ಅಜಿತ್ ಪವಾರ್ ಅವರನ್ನು ಹೆದರಿಸಿ-ಬೆದರಿಸಿ ಎನ್‌ಸಿಪಿಯನ್ನು ಬಿಜೆಪಿ ಇಭ್ಭಾಗ ಮಾಡಿತು. ಅಜಿತ್ ಬಣವನ್ನು ಆಡಳಿತಾರೂಢ ಮಹಾಯುತಿ ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಲಾಯಿತು.

ಪಕ್ಷಾಂತರ ನಿರೋಧಕ ಕಾಯ್ದೆಯ ಅಡಿಯಲ್ಲಿ ಅನರ್ಹತೆಯಿಂದ ಪಾರಾಗಲು ಕನಿಷ್ಠ ಮೂರನೇ ಎರಡರಷ್ಟು ಶಾಸಕರನ್ನು ಒಟ್ಟಿಗೆ ಸೆಳೆಯುವ ಮತ್ತು ಮೂಲ ಪಕ್ಷದ ಚಿಹ್ನೆಯನ್ನೇ ಕಾನೂನುಬದ್ಧವಾಗಿ ವಶಪಡಿಸಿಕೊಳ್ಳುವ ಮಟ್ಟಿಗೆ ಬಿಜೆಪಿ ತನ್ನ ಕುತಂತ್ರಗಳನ್ನು ಯಶಸ್ವಿಗೊಳಿಸಿತು.

ಇದೀಗ, ಲೋಕಸಭೆಯಲ್ಲಿ ಎನ್‌ಡಿಎ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳಲು ಹವಣಿಸುತ್ತಿರುವ ಬಿಜೆಪಿ, ಶಿವಸೇನೆ (ಯುಬಿಟಿ)ಯಲ್ಲಿರುವ ಸಂಸದರನ್ನೂ ಹೊತ್ತೊಯ್ಯಲು ಕುತಂತ್ರ ಹೆಣೆದಿದೆ. ಆಪರೇಷನ್ ಟೈಗರ್ ಎಂಬ ಬಲೆ ಬೀಸಿದೆ. ಮುಂಗಾರು ಅಧಿವೇಶನಕ್ಕೂ ಮುಂಚೆಯೇ ಉದ್ಧವ್ ಅವರ ಸಂಸದರನ್ನು ಶಿಂಧೆ ಬಣಕ್ಕೆ ಸೇರಿಸುವ ಹುನ್ನಾರ ಬಿಜೆಪಿಗಿದೆ.

ಆದಾಗ್ಯೂ, ತಮ್ಮ ಸಂಸದರನ್ನು ಉಳಿಸಿಕೊಳ್ಳಲು ಉದ್ಧವ್ ಬಣ ಹರಸಾಹಸ ಪಡುತ್ತಿದೆ. ಸಂಜಯ್ ರಾವತ್ ಅವರು ಆಪರೇಷನ್ ವುಲ್ಫ್ ಎಂಬ ಹೆಸರಿನಲ್ಲಿ ತಮ್ಮ ಸಂಸದರನ್ನು ಪಕ್ಷ ತೊರೆಯದಂತೆ ತಡೆಯಲು ಕಾರ್ಯತಂತ್ರ ರೂಪಿಸಿದ್ದಾರೆ. ನಮ್ಮ ಎಲ್ಲ ಸಂಸದರೂ ಉದ್ಧವ್ ಠಾಕ್ರೆಯವರೊಂದಿಗೇ ಇದ್ದಾರೆ ಎಂದು ಪ್ರತಿಪಾದಿಸಿದ್ದಾರೆ. ಆದರೂ, ಉದ್ಧವ್ ಅವರು ಸಂಸದರು ತಮ್ಮನ್ನು ತೊರೆಯಲು ಬಯಸಿದರೆ ಹೋಗಲು ಸ್ವತಂತ್ರರೆಂದು ಹೇಳುವ ಮೂಲಕ ಗಂಭೀರತೆ ಪ್ರದರ್ಶಿಸಿದ್ದಾರೆ.

ಬಿಜೆಪಿ ಆಪರೇಷನ್ ಕಮಲದ ಕರಾಳ ಇತಿಹಾಸ

ವಿರೋಧ ಪಕ್ಷಗಳನ್ನು ಒಡೆಯುವ, ಇಬ್ಭಾಗ ಮಾಡುವ, ಶಾಸಕರು ಮತ್ತು ಸಂಸದರನ್ನು ಅಪಹರಿಸುವ ಬಿಜೆಪಿ ಕೃತ್ಯಗಳು ಕೇವಲ ಮಹಾರಾಷ್ಟ್ರದಲ್ಲಿ ಮಾತ್ರವೇ ನಡೆದಿಲ್ಲ. ದೇಶದ ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಮತ್ತು ರಾಷ್ಟ್ರೀಯ ವಿರೋಧ ಪಕ್ಷಗಳನ್ನು ಬಿಜೆಪಿ ಒಡೆದಿದೆ.

ಅಂದಹಾಗೆ, ಬಿಜೆಪಿಯ ಈ ಆಪರೇಷನ್ ಕಮಲ ಎಂಬ ಕುತಂತ್ರ ರೂಪುಗೊಂಡಿದ್ದೇ ಕರ್ನಾಟಕದಲ್ಲಿ. 2008ರಲ್ಲಿ, ಕರ್ನಾಟಕದಲ್ಲಿ ಮೊದಲ ಬಾರಿಗೆ ಬಿಜೆಪಿ ಇಂತಹದೊಂದು ಕೃತ್ಯಕ್ಕೆ ಕೈಹಾಕಿತು. ಯಶಸ್ಸನ್ನೂ ಕಂಡಿತು. ನಂತರ, ಆಪರೇಷನ್ ಕಮಲ ಎಂಬುದು ರಾಷ್ಟ್ರೀಯ ಮಟ್ಟದಲ್ಲಿ ಮುನ್ನೆಲೆ ಬಂದಿತು. ಆದಾಗ್ಯೂ, 2019ರಲ್ಲಿ ಕರ್ನಾಟಕದಲ್ಲಿಯೇ ಮತ್ತೆ ಆಪರೇಷನ್ ಕಮಲವನ್ನು ಬಿಜೆಪಿ ಯಶಸ್ವಿಗೊಳಿಸಿತು. ಆಗ, ರಾಜ್ಯದಲ್ಲಿದ್ದ ಕಾಂಗ್ರೆಸ್ ಮತ್ತು ಜೆಡಿಎಸ್ ಮೈತ್ರಿ ಸರ್ಕಾರವನ್ನು ಉರುಳಿಸಲು ಉಭಯ ಪಕ್ಷಗಳ 17 ಶಾಸಕರಿಂದ ರಾಜೀನಾಮೆ ಕೊಡಿಸಿ, ರೆಸಾರ್ಟ್ ರಾಜಕಾರಣದ ಮೂಲಕ ಸರ್ಕಾರವನ್ನು ಬಿಜೆಪಿ ಪತನಗೊಳಿಸಿತು. ಸರ್ಕಾರದ ಚುಕ್ಕಾಣಿ ಹಿಡಿಯಿತು.

ಇದೇ ರೀತಿಯ ಮತ್ತೊಂದು ದೊಡ್ಡ ರಾಜಕೀಯ ಸ್ಥಿತ್ಯಂತರ ಕಂಡಿದ್ದು ಮಧ್ಯಪ್ರದೇಶ. ಅಲ್ಲಿ, 2020ರಲ್ಲಿ ಕಾಂಗ್ರೆಸ್‌ನ ಯುವ ನಾಯಕನಾಗಿದ್ದ ಜ್ಯೋತಿರಾದಿತ್ಯ ಸಿಂಧಿಯಾ ಅವರ ನೇತೃತ್ವದಲ್ಲಿ ಭಾರಿ ಬಂಡಾಯ ಸೃಷ್ಟಿಸಿ, ಅವರೊಂದಿಗೆ 22 ಶಾಸಕರನ್ನು ಬಿಜೆಪಿ ಕರೆದೊಯ್ಯಿತು. ಪರಿಣಾಮವಾಗಿ ಕಮಲ್ ನಾಥ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಪತನಗೊಂಡು, ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿತು. ಈ ಕಾರ್ಯಾಚರಣೆಯು ಕೇವಲ ಒಂದು ರಾಜ್ಯದ ಸರ್ಕಾರವನ್ನು ಬದಲಾಯಿಸಲಿಲ್ಲ, ಬದಲಿಗೆ ದೇಶದ ಅತ್ಯಂತ ಹಳೆಯ ಪಕ್ಷವಾದ ಕಾಂಗ್ರೆಸ್‌ಗೆ ಭಾರಿ ಸಾಂಸ್ಥಿಕ ಹೊಡೆತವನ್ನೂ ನೀಡಿತು.

ತದನಂತರ, ರಾಜಸ್ಥಾನದಲ್ಲೂ ಸಚಿನ್ ಪೈಲಟ್ ಅವರ ಮೂಲಕ ಇಂತಹದ್ದೇ ಬಂಡಾಯ ಎಬ್ಬಿಸಿಲು ಬಿಜೆಪಿ ಪ್ರಯತ್ನಿಸಿದರು. ಆದರೆ, ಅದು ಯಶಸ್ವಿಯಾಗಲಿಲ್ಲ. ಸಚಿನ್ ಪೈಲಟ್ ಅವರು ಪಕ್ಷ ತೊರೆಯದಂತೆ ತಡೆಯುವಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಶಸ್ವಿಯಾಯಿತು.

ಗೋವಾ ರಾಜ್ಯದಲ್ಲೂ ಸಹ ಬಿಜೆಪಿ ಇಂತಹದ್ದೇ ತಂತ್ರವನ್ನು ಹಲವು ಬಾರಿ ಪ್ರಯೋಗಿಸಿದೆ. 2019ರಲ್ಲಿ 10 ಮಂದಿ ಕಾಂಗ್ರೆಸ್ ಶಾಸಕರನ್ನು ಮತ್ತು 2022ರಲ್ಲಿ 8 ಮಂದಿ ಹಿರಿಯ ಕಾಂಗ್ರೆಸ್ ಶಾಸಕರನ್ನು ಒಟ್ಟಾಗಿ ಬಿಜೆಪಿಗೆ ಸೇರಿಸಿಕೊಳ್ಳುವ ಮೂಲಕ ಇಡೀ ಶಾಸಕಾಂಗ ಪಕ್ಷವನ್ನೇ ಬಿಜೆಪಿಯೊಳಗೆ ವಿಲೀನ ಮಾಡಲಾಯಿತು. ಈ ಮೂಲಕ ಚುನಾವಣೆಯಲ್ಲಿ ಬಹುಮತ ಗಳಿಸದಿದ್ದರೂ, ನಂತರದ ದಿನಗಳಲ್ಲಿ ವಿರೋಧ ಪಕ್ಷದ ಬಲವನ್ನು ಸಂಪೂರ್ಣವಾಗಿ ಕುಗ್ಗಿಸಿ ಅಧಿಕಾರವನ್ನು ಗಟ್ಟಿಗೊಳಿಸಿಕೊಳ್ಳುವ ತಂತ್ರವನ್ನು ಪ್ರದರ್ಶಿಸಲಾಯಿತು.

ಈಶಾನ್ಯ ಭಾರತದ ರಾಜ್ಯಗಳಾದ ಅರುಣಾಚಲ ಪ್ರದೇಶ, ಮಣಿಪುರ ಹಾಗೂ ಮೇಘಾಲಯಗಳಲ್ಲೂ ಕಾಂಗ್ರೆಸ್ ಮತ್ತು ಸ್ಥಳೀಯ ಪ್ರಾದೇಶಿಕ ಪಕ್ಷಗಳ ಶಾಸಕರನ್ನು ಸಾರಾಸಗಟಾಗಿ ವಿಲೀನಗೊಳಿಸಿಕೊಳ್ಳುವ ಮೂಲಕ ಇಡೀ ರಾಜ್ಯ ಘಟಕಗಳನ್ನೇ ಬಿಜೆಪಿ ತನ್ನದಾಗಿಸಿಕೊಂಡ ಇತಿಹಾಸವಿದೆ.

ಬಿಹಾರದ ರಾಜಕೀಯದಲ್ಲೂ ಸಹ ನಿತೀಶ್ ಕುಮಾರ್ ಅವರ ಜೆಡಿಯು ಮತ್ತು ಲಾಲೂ ಪ್ರಸಾದ್ ಯಾದವ್ ಅವರ ಆರ್‌ಜೆಡಿ ಪಕ್ಷಗಳ ಮೈತ್ರಿಯನ್ನು ಮುರಿಯಲು ಬಿಜೆಪಿ ನಿರಂತರ ರಾಜಕೀಯ ಒತ್ತಡ ಹಾಗೂ ಕಾರ್ಯತಂತ್ರಗಳನ್ನು ಬಳಸಿತ್ತು. ಇತ್ತೀಚೆಗೆ, ದೆಹಲಿಯಲ್ಲೂ ಸಹ ಆಮ್ ಆದ್ಮಿ ಪಕ್ಷದೊಳಗೆ ಇಂತಹದ್ದೇ ಅಸಮಾಧಾನಗಳು ಕಾಣಿಸಿಕೊಂಡಿವೆ. ಇದರ ಹಿಂದೆ ಬಿಜೆಪಿಯೇ ಇದೆ ಎಂಬ ಆರೋಪಗಳೂ ಇವೆ.

ಬಿಜೆಪಿ ತನ್ನ ಅಧಿಕಾರ ಬಲ, ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ ಹಾಗೂ ಚುನಾವಣಾ ಕುತಂತ್ರಗಳ ಮೂಲಕ ವಿಪಕ್ಷಗಳನ್ನು ಹಣಿಯುವ ಮತ್ತು ಒಡೆಯುವಲ್ಲಿ ಯಶಸ್ಸು ಕಾಣುತ್ತಿದೆ. ಇಂತಹ ತಂತ್ರಗಳು ಭಾರತೀಯ ರಾಜಕೀಯದಲ್ಲಿ ಅಸ್ಥಿರತೆಯನ್ನು ಹೆಚ್ಚಿಸುತ್ತವೆ. ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತದೆ ಎಂದು ವಿಮರ್ಶಕರು ಆತಂಕ ವ್ಯಕ್ತಪಡಿಸಿದ್ದಾರೆ.

ಸಂವಿಧಾನ ಏನು ಹೇಳುತ್ತದೆ? ಹಿರಿಯ ಪತ್ರಕರ್ತ ರಾಜಾರಾಂ ತಲ್ಲೂರು ಏನು ಹೇಳುತ್ತಾರೆ?

ಇಂದು ಅಕೌಂಟೆಬಿಲಿಟಿ ಬಗ್ಗೆ ನಡೆಯುತ್ತಿರುವ ಚರ್ಚೆಯನ್ನು ನಾವು ಹೇಗೆ ನೋಡಬೇಕೆಂದರೆ, ಸಂವಿಧಾನ ಇರುವುದು ಕೇವಲ ಅಕ್ಷರಗಳಲ್ಲಿ () ಮಾತ್ರ ಅಲ್ಲ. ಅದಕ್ಕೊಂದು ಆತ್ಮ () ಇದೆ. ಆ ಸ್ಪಿರಿಟ್‌ಗೆ ತಲೆಬಾಗುವ ಪ್ರತಿಯೊಬ್ಬರೂ ನೆಲದ ಕಾನೂನಿಗೆ ಬದ್ಧರಾಗಿ, ಅಕೌಂಟೆಬಲ್ ಆಗಿ ವ್ಯವಹರಿಸುವುದು ದೇಶಪ್ರೇಮದ ಮೂಲಭೂತ ವ್ಯಾಖ್ಯಾನ ಆಗಬೇಕು.



ಇಂಟರ್ನೆಟ್ ಆರ್ಕೈವ್ಸ್ ನಲ್ಲಿ ಸಂವಿಧಾನದ ಪ್ರತಿ ಸಿಕ್ಕಿತು. ಇದೇ ಅವರ ಲೇಟೆಸ್ಟ್ ಅಥವಾ ಇದರ ಬಳಿಕ ತಿದ್ದುಪಡಿಗಳಾಗಿವೆಯೋ ಗೊತ್ತಿಲ್ಲ. ಆಗಿದ್ದರೆ, ಅದು ಸಾರ್ವಜನಿಕವಾಗಿ ಲಭ್ಯ ಇಲ್ಲ. ಈ ಸಂವಿಧಾನದ ಆರ್ಟಿಕಲ್ 1ರ ಪ್ರಕಾರ, ಒಂದು ಸಂಸ್ಥೆ(). ಅದು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವುದರಿಂದ, ಸಹಜವಾಗಿಯೇ ಒಂದು .

ಹಾಗಾಗಿ ''ಅದು ವ್ಯಕ್ತಿಗಳ ಸಮೂಹ; ಆ ಸಮೂಹಕ್ಕೆ ನೋಂದಣಿ ಅಗತ್ಯವಿಲ್ಲ'' ಎಂಬ ವಾದಕ್ಕೆ ಹುರುಳಿಲ್ಲ. ಆ ರೀತಿಯ ವಿತಂಡವಾದ ಮಾಡಹೊರಟರೆ, ನಾಳೆ ಯಾವುದೇ ''ಆನಿ ಕಂಪನಿ'' ತಮ್ಮದೂ ವ್ಯಕ್ತಿಗಳ ಸಮೂಹವೇ, ತಾವು ಸರ್ಕಾರದ ಬೆನಿಫಿಟ್ಸ್ ಇನ್ನು ಪಡೆಯುವುದಿಲ್ಲ, ಹಾಗಾಗಿ ಅಕೌಂಟೆಬಲ್ ಆಗಬೇಕಾಗಿಲ್ಲ ಎಂದು ಹೊರಡಬಹುದು!

ಸಂವಿಧಾನದ ಆರ್ಟಿಕಲ್ 22() ಪ್ರಕಾರ ಅವರ ''ನಿಧಿಗಳ'' ನಿರ್ವಹಣೆಯ ಆಡಿಟ್ ಕಡ್ಡಾಯ. ಭಾರತದಲ್ಲಿ ಆಡಿಟ್ ವ್ಯವಸ್ಥೆ ಕಾನೂನುಬದ್ಧ ಮತ್ತು ಅದು ಭಾರತದ ಸಂವಿಧಾನದ ಯಾವುದೋ ಒಂದು ಚೌಕಟ್ಟಿನೊಳಗೇ ವ್ಯವಹರಿಸಬೇಕಾಗುತ್ತದೆಯೇ ಹೊರತು, ಒಟ್ಟಾರೆ ಲೆಕ್ಕಪತ್ರ ನಿರ್ವಹಿಸಿದರೆ ಅದು ''ಆಡಿಟ್'' ಅನ್ನಿಸಿಕೊಳ್ಳುವುದಿಲ್ಲ.

ಅಕಸ್ಮಾತ್, ಇದು ಯಾವುದೂ ಅನ್ವಯ ಆಗುವುದಿಲ್ಲ ಎಂದಿಟ್ಟುಕೊಳ್ಳಿ. ಅಥವಾ ಸಕ್ಷಮ ಪ್ರಾಧಿಕಾರದಲ್ಲಿ ಅಥವಾ ನ್ಯಾಯಾಲಯಗಳಲ್ಲಿ ಈ ಬಗ್ಗೆ ದಾವೆ ಹೂಡಿ, ಗೆ ನೋಂದಣಿ ಅಗತ್ಯ ಇಲ್ಲ ಎಂದು ಅಲ್ಲಿನ ತೀರ್ಮಾನ/ತೀರ್ಪು ಹೇಳಿದೆ ಎಂದಿಟ್ಟುಕೊಳ್ಳಿ. ಈಗ ಡೇಟಾ ಪ್ರೈವೆಸಿ ಕಾಯಿದೆ ಬಂದಿದೆ( ). ಅದರ ಪ್ರಕಾರ, ದೇಶದ ಪ್ರಜೆಗಳ ಡೇಟಾಗಳನ್ನು ಸಂಗ್ರಹಿಸಿಟ್ಟುಕೊಳ್ಳುವ ಯಾವುದೇ ಸಂಸ್ಥೆಯು ಸರ್ಕಾರಕ್ಕೆ, ವ್ಯವಸ್ಥೆಗೆ ಅಕೌಂಟೆಬಲ್ ಆಗಿರಬೇಕಾಗುತ್ತದೆ(ಅವರ ಆರ್ಟಿಕಲ್ 7ರ ಪ್ರಕಾರ ಅವರು ಸ್ವಯಂಸೇವಕರ ರಿಜಿಸ್ಟರ್ ಹೊಂದಿದ್ದಾರೆ, ಬಾಲ ಸ್ವಯಂಸೇವಕರೂ ಆ ಸಂಘಟನೆಯಲ್ಲಿ ಇದ್ದಾರೆ). ಅದನ್ನು ಪರಿಶೀಲಿಸುವ ಅಧಿಕಾರ ಸರ್ಕಾರಿ ವ್ಯವಸ್ಥೆಗೆ ಇದೆ.

ನನಗೆ ಒಟ್ಟಿನಲ್ಲಿ, ಇಂದು ಅಕೌಂಟೆಬಿಲಿಟಿ ಬಗ್ಗೆ ನಡೆಯುತ್ತಿರುವ ಚರ್ಚೆಯನ್ನು ನಾವು ಹೇಗೆ ನೋಡಬೇಕೆಂದರೆ, ಸಂವಿಧಾನ ಇರುವುದು ಕೇವಲ ಅಕ್ಷರಗಳಲ್ಲಿ () ಮಾತ್ರ ಅಲ್ಲ. ಅದಕ್ಕೊಂದು ಆತ್ಮ () ಇದೆ. ಆ ಸ್ಪಿರಿಟ್‌ಗೆ ತಲೆಭಾಗುವ ಪ್ರತಿಯೊಬ್ಬರೂ ನೆಲದ ಕಾನೂನಿಗೆ ಬದ್ಧರಾಗಿ, ಅಕೌಂಟೆಬಲ್ ಆಗಿ ವ್ಯವಹರಿಸುವುದು ದೇಶಪ್ರೇಮದ ಮೂಲಭೂತ ವ್ಯಾಖ್ಯಾನ ಆಗಬೇಕು. ಸಂವಿಧಾನದಲ್ಲಿ ''ಇಂತಹದೊಂದು ಅಂಶ'' ಇಲ್ಲ ಎಂಬ ಕಾರಣಕ್ಕೆ, ಸಾರ್ವಜನಿಕ ಸಂಸ್ಥೆಯೊಂದು ತಾನು ಅಕೌಂಟೆಬಲ್ ಆಗಬೇಕಾಗಿಲ್ಲ ಎಂದು ವಾದ ಹೂಡುವುದು ಸಹಜ ನ್ಯಾಯ ಅನ್ನಿಸುವುದಿಲ್ಲ.

ಹಿರಿಯ ಪತ್ರಕರ್ತರು, ರಾಜಕೀಯ ವಿಶ್ಲೇಷಕರು. ಉಡುಪಿಯ ಕುಂದಾಪುರ ತಾಲ್ಲೂಕಿನ ತಲ್ಲೂರು ಗ್ರಾಮದಲ್ಲಿ 1969ರಲ್ಲಿ ಜನಿಸಿದರು. ಕರಾವಳಿ ಅಲೆ, ಕೆನರಾಟೈಮ್ಸ್, ಜನಂತರಂಗ ಬಳಗದಲ್ಲಿ ಪತ್ರಕರ್ತರಾಗಿ ದುಡಿಮೆ ಆರಂಭಿಸಿದರು. ಪಟ್ಟಾಂಗ ಎಂಬ ಪತ್ರಿಕೆ ಮತ್ತು ಸವಿ ಎಂಬ ಜಾಹೀರಾತು ಏಜೆನ್ಸಿ ಪ್ರಾರಂಭಿಸಿದರು. 2000ರಲ್ಲಿ ಉದಯವಾಣಿ ಆನ್ ಲೈನ್ ಆವೃತ್ತಿಗೆ ಸುದ್ದಿ ಸಂಪಾದಕರಾಗಿ, ಆರೋಗ್ಯ ಪುರವಣಿಗೆ ಸಂಪಾದಕರಾಗಿ ಸೇವೆ ಸಲ್ಲಿಸಿದರು. 2008ರಿಂದ ತಲ್ಲೂರಿನಲ್ಲಿ ತಲ್ಲೂರು ಫ್ಯಾಮಿಲಿ ಟ್ರಸ್ಟ್(ರಿ.) ಮೂಲಕ ನಾರಾಯಣ ವಿಶೇಷ ಮಕ್ಕಳ ಶಾಲೆ ಮತ್ತಿತರ ಸಾಮಾಜಿಕ ಚಟುವಟಿಕೆಗಳಲ್ಲಿ ನಿರತ ಟ್ರಸ್ಟಿಯಾಗಿ ಸೇವೆ ಸಲ್ಲಿಸುತ್ತಲೇ 2015ರಲ್ಲಿ ಪ್ರೊಡಿಜಿ ಮುದ್ರಣ -ಸಂಸ್ಥೆ ಆರಂಭಿಸಿದರು. ಪ್ರಕಟಿತ ಕೃತಿಗಳು: 'ನುಣ್ಣನ್ನ ಬೆಟ್ಟ' (2017), 'ತಲ್ಲೂರು ಎಲ್ ಎನ್'(2018), 'ಏನಿದು ಪೌರತ್ವ ಕಾಯಿದೆ? (2019), 'ದುಪ್ಪಟ್ಟು'(2020), ಕರಿಡಬ್ಬಿ(2022). ಪುರಸ್ಕಾರಗಳು: ಅಮ್ಮ ಪ್ರಶಸ್ತಿ(2017), ಶಿವರಾಮ ಕಾರಂತ ಪುರಸ್ಕಾರ-2019 (2020).

ಹಿರಿಯ ಪತ್ರಕರ್ತರು, ರಾಜಕೀಯ ವಿಶ್ಲೇಷಕರು. ಉಡುಪಿಯ ಕುಂದಾಪುರ ತಾಲ್ಲೂಕಿನ ತಲ್ಲೂರು ಗ್ರಾಮದಲ್ಲಿ 1969ರಲ್ಲಿ ಜನಿಸಿದರು. ಕರಾವಳಿ ಅಲೆ, ಕೆನರಾಟೈಮ್ಸ್, ಜನಂತರಂಗ ಬಳಗದಲ್ಲಿ ಪತ್ರಕರ್ತರಾಗಿ ದುಡಿಮೆ ಆರಂಭಿಸಿದರು. ಪಟ್ಟಾಂಗ ಎಂಬ ಪತ್ರಿಕೆ ಮತ್ತು ಸವಿ ಎಂಬ ಜಾಹೀರಾತು ಏಜೆನ್ಸಿ ಪ್ರಾರಂಭಿಸಿದರು. 2000ರಲ್ಲಿ ಉದಯವಾಣಿ ಆನ್ ಲೈನ್ ಆವೃತ್ತಿಗೆ ಸುದ್ದಿ ಸಂಪಾದಕರಾಗಿ, ಆರೋಗ್ಯ ಪುರವಣಿಗೆ ಸಂಪಾದಕರಾಗಿ ಸೇವೆ ಸಲ್ಲಿಸಿದರು. 2008ರಿಂದ ತಲ್ಲೂರಿನಲ್ಲಿ ತಲ್ಲೂರು ಫ್ಯಾಮಿಲಿ ಟ್ರಸ್ಟ್(ರಿ.) ಮೂಲಕ ನಾರಾಯಣ ವಿಶೇಷ ಮಕ್ಕಳ ಶಾಲೆ ಮತ್ತಿತರ ಸಾಮಾಜಿಕ ಚಟುವಟಿಕೆಗಳಲ್ಲಿ ನಿರತ ಟ್ರಸ್ಟಿಯಾಗಿ ಸೇವೆ ಸಲ್ಲಿಸುತ್ತಲೇ 2015ರಲ್ಲಿ ಪ್ರೊಡಿಜಿ ಮುದ್ರಣ -ಸಂಸ್ಥೆ ಆರಂಭಿಸಿದರು. ಪ್ರಕಟಿತ ಕೃತಿಗಳು: 'ನುಣ್ಣನ್ನ ಬೆಟ್ಟ' (2017), 'ತಲ್ಲೂರು ಎಲ್ ಎನ್'(2018), 'ಏನಿದು ಪೌರತ್ವ ಕಾಯಿದೆ? (2019), 'ದುಪ್ಪಟ್ಟು'(2020), ಕರಿಡಬ್ಬಿ(2022). ಪುರಸ್ಕಾರಗಳು: ಅಮ್ಮ ಪ್ರಶಸ್ತಿ(2017), ಶಿವರಾಮ ಕಾರಂತ ಪುರಸ್ಕಾರ-2019 (2020).

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR